ಸಂಪುಟ: 06 ಸಂಚಿಕೆ: 180 ಪುಟಗಳು: 08 ಶುಕ್ರವಾರ 11 ಸೆಪ್ಟೆಂಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಸಾಲ ಮಾಡದೇ ಜೀವನ ಮಾಡುವವನೇ ಶ್ರೀಮಂತ. ಸಾಲಕ್ಕಾಗಿ ಪರದಾಡುವವನೇ ಬಡವ. ಸಾಲ ಕೊಟ್ಟು ಸಮಯಕ್ಕೆ ಮರಳಿ ಬರಲಾರದಕ್ಕೆ ಅಲೆದಾಡುವವನೇ ಭಿಕ್ಷುಕ.

## ರಾಜ್ಯ ಸರ್ಕಾರದ ಕಾರ್ಯಕ್ರಮಗಳಲ್ಲಿ ವಂದೇ ಮಾತರಂ ಗೀತೆಯ ಮೊದಲ ಎರಡು ಚರಣ ಮಾತ್ರ ಹಾಡಲು ರಾಜ್ಯ ಸರ್ಕಾರ ಆದೇಶ

• ಉದಯವಾಹಿನಿ, ಬೆಂಗಳೂರು

ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು, ಪ್ರಧಾನಮಂತ್ರಿಗಳು ಹಾಗೂ ರಾಜ್ಯಪಾಲರು ಉಪಸ್ಥಿತರಿರುವ ಕಾರ್ಯಕ್ರಮಗಳನ್ನು ಹೊರತುಪಡಿಸಿ, ರಾಜ್ಯ ಸರ್ಕಾರದ ಕಾರ್ಯಕ್ರಮಗಳಲ್ಲಿ ವಂದೇ ಮಾತರಂ ಗೀತೆಯ ಮೊದಲ ಎರಡು ಚರಣಗಳನ್ನು ಮಾತ್ರ ಹಾಡಲು ಆದೇಶಿಸಲಾಗಿದೆ.


ಎಐಸಿಸಿ ಪಕ್ಷದ ಕಾರ್ಯಕ್ರಮಗಳಲ್ಲಿ ವಂದೇ ಮಾತರಂ ಗೀತೆಯ ಎರಡು ಚರಣಗಳನ್ನು ಅಷ್ಟೇ ಹಾಡಲು ನಿರ್ಣಯ ಕೈಗೊಂಡಿರುವ ಹಿನ್ನೆಲೆ ರಾಜ್ಯ ಕಾಂಗ್ರೆಸ್ ಸರ್ಕಾರವೂ ರಾಜ್ಯದ ಸರ್ಕಾರಿ ಕಾರ್ಯಕ್ರಮಗಳಲ್ಲಿ ವಂದೇ ಮಾತರಂ ಗೀತೆಯ ಮೊದಲ ಎರಡು ಚರಣ ಹಾಡಲು ತೀರ್ಮಾನಿಸಿದೆ. ಆದೇಶದಲ್ಲಿ ಭಾರತದ ರಾಷ್ಟ್ರೀಯ ಚಳವಳಿಯ ಸಂದರ್ಭದಲ್ಲಿ ದೇಶದ ಜನರಲ್ಲಿ ರಾಷ್ಟ್ರೀಯತೆ, ಏಕತೆ ಮತ್ತು ದೇಶಭಕ್ತಿಯ ಭಾವನೆಯನ್ನು ಮೂಡಿಸುವಲ್ಲಿ ವಂದೇ ಮಾತರಂ ಗೀತೆಯು ಮಹತ್ವದ ಪಾತ್ರವನ್ನುವಹಿಸಿರುತ್ತದೆ.

ಭಾರತ ಸರ್ಕಾರದ ಗೃಹ ವ್ಯವಹಾರಗಳ ಸಚಿವಾಲಯ ವಂದೇ ಮಾತರಂ ರಾಷ್ಟ್ರೀಯ ಗೀತೆಯ ಅಧಿಕೃತ ಆವೃತ್ತಿ ಹಾಗೂ ವಿವಿಧ ಸರ್ಕಾರಿ ಮತ್ತು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅದರ ಗಾಯನ ಅಥವಾ ವಾದನಕ್ಕೆ ಸಂಬಂಧಿಸಿದಂತೆ ಸಂದರ್ಭಾನುಸಾರ ಪಾಲಿಸಬೇಕಾದ ಮಾರ್ಗಸೂಚಿಗಳನ್ನು ಹೊರಡಿಸಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಗಳಲ್ಲಿ ರಾಷ್ಟ್ರೀಯ ಗೀತೆಯ ವಾದನ ಮತ್ತು ಸಾಮೂಹಿಕ ಗಾಯನ ಕ್ಕೆ ಸಂಬಂಧಿಸಿದ ಸಂದರ್ಭಗಳನ್ನು ಪ್ರತ್ಯೇಕವಾಗಿ ನಿರ್ದಿಷ್ಟಪಡಿಸಲಾಗಿದೆ ಎಂದು ವಿವರಿಸಿದೆ.

## ಹಿತ್ತಾಳೆ ಗಂಟೆಗಳಲ್ಲಿ ಮೂಡಿದ ನಾದಗಣೇಶ

• ಉದಯವಾಹಿನಿ, ಬೆಂಗಳೂರು

ಎಲೆಕ್ಟ್ರಾನಿಕ್ ಸಿಟಿಯ ಇಸಿಟಿ ಮಾಲ್‌ನಲ್ಲಿ ಗಣೇಶ ಚತುರ್ಥಿಯ ಸಂಭ್ರಮದ ಪ್ರಯುಕ್ತ 2,000ಕ್ಕೂ ಹೆಚ್ಚು ಸಾಂಪ್ರದಾಯಿಕ ಹಿತ್ತಾಳೆ ಗಂಟೆಗಳಿಂದ ರಚಿಸಲಾದ ಅಪರೂಪದ ಗಣೇಶನ ಮೂರ್ತಿಯನ್ನು ಅನಾವರಣಗೊಳಿಸಿದೆ. ಈ ಗಣಪತಿ ಕಲಾಕೃತಿಯು ಕೇವಲ ಗಾತ್ರದಿಂದಷ್ಟೇ ಅದ್ದೂರಿಯಾಗಿಲ್ಲ, ಬದಲಿಗೆ 2.5 ರಿಂದ 5 ಇಂಚುಗಳವರೆಗಿನ ಸಾವಿರಾರು ಗಂಟೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಜೋಡಿಸಿ ನಿರ್ಮಿಸಿರುವ ವಿಶಿಷ್ಟ ರೂಪದಿಂದ



ಗಮನ ಸೆಳೆಯುತ್ತದೆ.

ಸೆ.15ರವರೆಗೆ ಮಾಲ್‌ನಲ್ಲಿ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿರುವ ಈ ಗಣೇಶ ಮೂರ್ತಿಯು ಈ ಹಬ್ಬದ ದಿನಗಳಲ್ಲಿ ಅತ್ಯಂತ ಪ್ರಮುಖ ಆಕರ್ಷಣೀಯ ತಾಣವಾಗಿ ಕಣನ ಸೆಳೆಯಲಿದೆ.

ಗಣೇಶ ಚತುರ್ಥಿ ನಂತರ, ಈ ಕಲಾಕೃತಿಯಲ್ಲಿ ಬಳಸಲಾದ 2,000ಕ್ಕೂ ಹೆಚ್ಚು ಹಿತ್ತಾಳೆ ಗಂಟೆಗಳನ್ನು ಆಶೀರ್ವಾದದ ನೆನಪಿನ ಕಾಣಿಕೆಯಾಗಿ ಗ್ರಾಹಕರಿಗೆ ವಿತರಿಸಲಾಗುತ್ತದೆ. ಈ ಮೂಲಕ ಸಾರ್ವಜನಿಕ ಪ್ರದರ್ಶನದಲ್ಲಿದ್ದ ಪ್ರತಿಯೊಂದು ಗಂಟೆಯೂ ಭಕ್ತಿಯ ವೈಯಕ್ತಿಕ ಸಂಕೇತವಾಗಿ ಬದಲಾಗುತ್ತದೆ. ಇದರಿಂದಾಗಿ ಸಂದರ್ಶಕರು ಕೇವಲ ನೆನಪಿನ ಕಾಣಿಕೆಯನ್ನಷ್ಟೇ ಅಲ್ಲದೆ, ಗಣಪತಿಯ ಆಶೀರ್ವಾದ, ಮಂಗಳಕರತೆಯ ಸಂಕೇತ ಹಾಗೂ ಇಸಿಟಿ ಮಾಲ್ನ ಹಬ್ಬದ ಸಂಭ್ರಮದ ನೆನಪನ್ನು ತಮ್ಮ ಮನೆಗಳಿಗೆ ಕೊಂಡೊಯ್ಯಲಿದ್ದಾರೆ.

## ನದಿ ನೀರನ್ನ ಕಲುಷಿತಗೊಳಿಸಿದ್ರೆ ಕಾರ್ಖಾನೆ ಮುಚ್ಚಿಸುತ್ತೇವೆ

• ಉದಯವಾಹಿನಿ, ಬೆಂಗಳೂರು

ನದಿ ನೀರನ್ನ ಕಲುಷಿತಗೊಳಿಸಿದ್ರೆ ಕಾರ್ಖಾನೆಗಳನ್ನ ಮುಚ್ಚಿಸುತ್ತೇವೆ ಎಂದು ಅರಣ್ಯ ಹಾಗೂ ಪರಿಸರ ಸಚಿವ ರಾಮಲಿಂಗಾರೆಡ್ಡಿ ಎಚ್ಚರಿಕೆ ನೀಡಿದರು. ಬೆಂಗಳೂರಿನಲ್ಲಿಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬೆಂಗಳೂರಿನಿಂದ ಕುಡಿಯಲು ಯೋಗ್ಯವಲ್ಲದ ನೀರು ಬರ್ತಿದೆ ಅಂತಾ ಎನ್‌ಜಿಟಿಗೆ ತಮಿಳುನಾಡಿನವರು ಕೇಸ್ ಹಾಕಿದ್ದಾರೆ. ಅ.14 ರಂದು ಕೇಸ್ ಇದೆ. ಅಧ್ಯಕ್ಷರ ಜೊತೆಗೆ ಮಾತುಕತೆ ನಡೆಸಿದ್ದೇನೆ. ನದಿ ಪಕ್ಕದ ಫ್ಯಾಕ್ಟರಿಗಳಿಗೆ ವಾರ್ನ್ ಮಾಡ್ತೇನೆ. ಎಸ್‌ಟಿಪಿ ಅಳವಡಿಸಬೇಕು, ನದಿ ನೀರನ್ನ ಕಲುಷಿತ ಮಾಡಿದ್ರೇ ಫ್ಯಾಕ್ಟರಿಗಳನ್ನ ಮುಚ್ಚಿಸ್ತೇವೆ ಎಂದು ಎಚ್ಚರಿಕೆ ನೀಡಿದರಲ್ಲದೇ, ಸದ್ಯ 4-5 ನದಿಗಳು ಬಿಟ್ಟರೆ ಉಳಿದೆಲ್ಲ ನದಿಗಳು ಬಹುತೇಕ ಕಲುಷಿತವಾಗಿವೆ ಎಂದು ತಿಳಿಸಿದರು. ಮುಂದುವರಿದು.. ಬೆಂಗಳೂರಲ್ಲಿ 4 ಲಕ್ಷ ಬೋರ್‌ವೆಲ್‌ಗಳಿವೆ. 2,500 ಎಂಎಲ್‌ಡಿ (ಮಿಲಿಯನ್ ಲೀಟರ್) ಚರಂಡಿ ನೀರು ಹೋಗ್ತಿದೆ. ಸೆಕೆಂಡರಿ ಟ್ರೀಟ್ ಮೆಂಟ್ ಮಾಡಿ ನೀರನ್ನು ಬಿಡಬೇಕಿದೆ. ನಮ್ಮೆಲ್ಲಾ ಬೆಂಗಳೂರು ನೀರು ನೇರವಾಗಿ ಕಾವೇರಿ ನದಿಗೆ ಸೇರ್ತಿದೆ. 1,100 ಎಂಎಲ್‌ಡಿ ನೀರು ಈಗಲೂ ಟ್ರೀಟ್ಮೆಂಟ್ ಇಲ್ಲದೇ ಹರಿದು ಹೋಗ್ತಿದೆ. ಆದ್ದರಿಂದಲೇ ಕುಡಿಯಲು ಯೋಗ್ಯವಲ್ಲದ ನೀರು ಬೆಂಗಳೂರಿನಿಂದ ಬಿಡ್ತಿದಾರೆ ಅಂತಾ ಎನ್‌ಜಿಟಿಗೆ ತಮಿಳುನಾಡು ದೂರು ನೀಡಿದೆ. ಹೀಗಾಗಿ ನೀರು ಟ್ರೀಟ್ಮೆಂಟ್‌ಗೆ ಮುಂದಾಗಿದ್ದೇವೆ ಎಂದು ವಿವರಿಸಿದ್ರು.

## ತಂತ್ರಜ್ಞಾನ ಬಳಸಿ, ಖುದ್ದು ಹಾಜರಾತಿ ಸಮಸ್ಯೆಯಾಗುತ್ತೆ ಸೆ.16ಕ್ಕೆ ವಿಚಾರಣೆ ಮುಂದೂಡಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಕೇಸ್ ಅನ್ನು ಸೆಷನ್ಸ್ ಕೋರ್ಟ್ ಈಗಾಗಲೇ ಟ್ರಯಲ್ ನಡೆಸುತ್ತಿದೆ. ಸೆಷನ್ ಕೋರ್ಟ್ ವಜಾಗೊಳಿಸಿದ್ದ ವಿಚಾರಣೆಗೆ ಖುದ್ದು ಹಾಜರಾಗಬೇಕೆಂಬ ದರ್ಶನ್ ಅರ್ಜಿ ಈಗ ಹೈಕೋರ್ಟ್‌ನಲ್ಲಿದ್ದು ಸೆ.16ಕ್ಕೆ ವಿಚಾರಣೆ ಮುಂದೂಡಿದೆ. ಖುದ್ದು ಹಾಜರಾತಿ ಬಗ್ಗೆ ದರ್ಶನ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಿಚಾರಣೆ ನಡೆಸಿತು. ನ್ಯಾ.ವಿ.ಶ್ರೀಶಾನಂದ ಅವರಿದ್ದ ಪೀಠದಲ್ಲಿ ವಿಚಾರಣೆ ನಡೆದಿದ್ದು, ದರ್ಶನ್ ಪರ ಹಿರಿಯ ವಕೀಲ ಹಷ್ಮತ್ ಪಾಷಾ ವಾದ ಮಂಡಿಸಿ, ಖುದ್ದು ಹಾಜರಾತಿಗೆ ಅವಕಾಶ ನೀಡಬೇಕು. ತಾಂತ್ರಿಕ ಕಾರಣಕ್ಕೆ ಸೂಕ್ತ ಸಂವಹನ ಸಾಧ್ಯವಾಗ್ತಿಲ್ಲ, ಮುಖ್ಯ ಸಾಕ್ಷಿಗಳ ವಿಚಾರಣೆ ವೇಳೆಯಲ್ಲಾದರೂ ಆರೋಪಿಗಳನ್ನು ಹಾಜರಿಡಬೇಕು ಅಂತಾ ವಾದಿಸಿದರು.

---

ನಮ್ಮ ಸರ್ಕಾರ ಈವರೆಗೂ 2.70 ಕೋಟಿ ಜನರಿಗೆ 1,41,210 ಕೋಟಿ ರೂ ಹಣವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ಜಮೆ ಮಾಡುವ ಮೂಲಕ ಪಾರದರ್ಶಕ ಆಡಳಿತ ನೀಡಿದೆ. ಎಸ್ ಸಿಪಿ ಟಿಎಸ್‌ಪಿ ಯೋಜನೆ ಮೂಲಕ ಪ್ರಸಕ್ತ ವರ್ಷ 42,018 ಕೋಟಿ ರೂಪಾಯಿ ನೀಡಲಾಗಿದೆ. ಈ ವರ್ಷ 28.63 ಲಕ್ಷ ರೈತರಿಗೆ ಶೂನ್ಯ ಮತ್ತು ಕಡಿಮೆ ಬಡ್ಡಿ ದರದಲ್ಲಿ 25,652 ಕೋಟಿ ರೂಪಾಯಿ ಸಾಲ ನೀಡಲಾಗಿದೆ. ರಾಜ್ಯದಲ್ಲಿ 17,073 ಕೋಟಿ ರೂ. ಮೊತ್ತದ 121 ನೀರಾವರಿ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ವಾರ್ಷಿಕ ಅನುದಾನವನ್ನು 3 ಸಾವಿರ ಕೋಟಿಯಿಂದ 5 ಸಾವಿರ ಕೋಟಿ ರೂಪಾಯಿಗೆ ಏರಿಕೆ ಮಾಡಲಾಗಿದೆ ಎಂದು ಹೇಳಿದರು. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 2.53 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆಯಾಗಿದ್ದು, ವಿದೇಶಿ ಬಂಡವಾಳ ಹೂಡಿಕೆ ಆಕರ್ಷಣೆಯಲ್ಲಿ ದೇಶದಲ್ಲೇ 2ನೇ ಸ್ಥಾನವನ್ನು ಕರ್ನಾಟಕ ಪಡೆದಿದೆ. 6ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗುವ ಸಾಧ್ಯತೆ ಇದೆ. ರಾಜ್ಯದ ಜಿಡಿಪಿ 32.81 ಲಕ್ಷ ಕೋಟಿ ರೂಪಾಯಿಗೆ ಏರಿಕೆಯಾಗಿದ್ದು, 8.1%ರಷ್ಟು ಪ್ರಗತಿ ಸಾಧಿಸಿ, ರಾಷ್ಟ್ರದ ಪ್ರಗತಿಗಿಂತ ಮುನ್ನಡೆ ಸಾಧಿಸಲಾಗಿದೆ ಎಂದು ಮುಖ್ಯಮಂತ್ರಿ ಅವರು ಮಾಹಿತಿ ನೀಡಿದರು.

# ಶಿವ ಪಥ ಶತಕದ ರಥ

ಡಿಕೆಶಿ ಸರ್ಕಾರಕ್ಕೆ 100 ದಿನ

ರಾಜ್ಯದ ಜನ ತಮ್ಮ ಕಷ್ಟಗಳನ್ನು ಬಗೆಹರಿಸಿಕೊಳ್ಳಲು ವಿಧಾನಸೌಧ, ಮಂತ್ರಿಗಳು, ಶಾಸಕರ ಕಚೇರಿ, ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು ಸರ್ಕಾರ ತೀರ್ಮಾನಿಸಿದೆ. ಸರ್ಕಾರವೇ ಜನರ ಮನೆ ಬಾಗಿಲಿಗೆ ಆಡಳಿತವನ್ನು ತೆಗೆದುಕೊಂಡು ಹೋಗಿ ಕಾನೂನು ಚೌಕಟ್ಟಿನಲ್ಲಿ ಅವರ ಸಮಸ್ಯೆಗೆ ಪರಿಹಾರ ನೀಡಲು ಮುಂದಾಗಿದೆ. ಅದಕ್ಕಾಗಿ ಪ್ರಜಾಸೇವೆ ಇಲಾಖೆ

### ಶಾಸಕರು, ಅಧಿಕಾರಿಗಳು ಜನರ ಸಂಕಷ್ಟಕ್ಕೆ ಸ್ಪಂದಿಸಬೇಕು

ಆರಂಭಿಸಲಾಗಿದೆ. ನಾನು ಚಾಲನೆ ನೀಡಿದ ಕಾರ್ಯಕ್ರಮದಲ್ಲಿ 30 ಸಾವಿರ ಅರ್ಜಿಗಳು ಬಂದಿವೆ. ಜನ ಪಿಂಚಣಿ, ಪೋಡಿ, ಖಾತೆ, ನಿವೇಶನ ಸೇರಿ ಅನೇಕ ಸಮಸ್ಯೆ ಹೇಳಿಕೊಂಡಿದ್ದಾರೆ. ಪ್ರತಿ ಮಂತ್ರಿಗಳು ತಮ್ಮ ಜಿಲ್ಲೆಗಳಲ್ಲಿ ಈ ಅಭಿಯಾನ ಮಾಡಬೇಕು. ಜನರ ಕಷ್ಟ ನಿವಾರಣೆ ಮಾಡಬೇಕು. ಶಾಸಕರು ಪಂಚಾಯತ್ ಮಟ್ಟದಲ್ಲಿ ಹೋಗಬೇಕು. ಶಾಸಕರು ಹೋಗದಿದ್ದರೆ ಅಧಿಕಾರಿಗಳು ಹೋಗಿ ಜನರಿಗೆ ಸ್ಪಂದಿಸಬೇಕು ಎಂದು ತಾಕೀತು ಮಾಡಿದರು.

ಮೇಕೆದಾಟು ಯೋಜನೆ ಸೇರಿದಂತೆ ರಾಜ್ಯದ ಜಲ ಭದ್ರತೆಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಉತ್ತರ ಕರ್ನಾಟಕದ ಮಹದಾಯಿ ಯೋಜನೆಗೆ ಸಣ್ಣ ಅಡೆತಡೆ ಇದೆ. ಇದನ್ನು ನಿವಾರಿಸಲು ಕೇಂದ್ರ ಸಚಿವರು ಹಾಗೂ ಸಂಸದರು ಪ್ರಯತ್ನಪಡುತ್ತಿಲ್ಲ. ಅವರ ಬದ್ಧತೆ ಬಗ್ಗೆ ನಮಗೆ ಪ್ರಶ್ನೆಗಳಿವೆ. ಈ ಬಗ್ಗೆ ಮುಂದಿನ ದಿನಗಳಲ್ಲಿ ಹೋರಾಟ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಲಾಲ್ ಬಾಗ್ ಮಾದರಿಯ 5 ಉದ್ಯಾನಗಳನ್ನು ನಿರ್ಮಿಸುವ ಉದ್ದೇಶವಿದೆ. ಅರಣ್ಯ ಇಲಾಖೆ ಜಾಗಗಳಲ್ಲಿ ಈ ಯೋಜನೆ ಮಾಡಲು ಸರ್ಕಾರ ಮುಂದಾಗಿದೆ ಎಂದು ತಿಳಿಸಿದರು.

### ಜಲ ಭದ್ರತೆಗೆ ಕ್ರಮ



ಆರ್ಥಿಕವಾಗಿ ಸದೃಢ, ಸಾಮಾಜಿಕವಾಗಿ ಸಶಕ್ತ, ತಂತ್ರಜ್ಞಾನದಲ್ಲಿ ಮುಂದುವರಿದ ಮತ್ತು ಮೌಲ್ಯಗಳಲ್ಲಿ ಆಳವಾಗಿ ಬೇರೂರಿದ ಕರ್ನಾಟಕ. ಇದಕ್ಕೆ ನಿಮ್ಮೆಲ್ಲರ ಸಹಕಾರ ಬೇಕು. ನಾನು ಮುಖ್ಯಮಂತ್ರಿ ಮಾತ್ರವಲ್ಲ, ಪ್ರಜಾ ಸೇವಕ.

24/7 ನಿಮ್ಮ ಸೇವೆಗೆ ಬದ್ಧವಾಗಿದ್ದೇನೆ. ಭ್ರಷ್ಟಾಚಾರರಹಿತ ಆಡಳಿತ ನೀಡಲು ಸಹಕಾರ ನೀಡಿ. ವಿರೋಧ ಪಕ್ಷದವರಿಗೆ ಸಹಕಾರ ಕೇಳಿದೆ. ಆದರೆ ಅವರಿಗೆ ರಾಜಕಾರಣವೇ ಮುಖ್ಯವಾಗಿದೆ ಎಂದರು.

### ನಮ್ಮ ಗುರಿ ದೃಢ ಕರ್ನಾಟಕ

ರಾಜ್ಯದಲ್ಲಿ ಕೈಗಾರಿಕಾ ಪ್ರಗತಿ ಸಾಧಿಸಲು ವೇಗದ ಅನುಮೋದನೆಗಳಿಗೆ ಆದ್ಯತೆ ನೀಡಲಾಗಿದ್ದು, 100 ದಿನಗಳಲ್ಲಿ 43,214 ಕೋಟಿ ಹೂಡಿಕೆಗೆ ಅನುಮೋದನೆ ನೀಡಲಾಗಿದೆ. ಹಿಂದುಳಿದ ತಾಲ್ಲೂಕುಗಳಲ್ಲಿ ಹೂಡಿಕೆಗೆ ವೇಗವರ್ಧನಾ ಪ್ಯಾಕೇಜ್ ನೀಡಲಾಗುವುದು.

ಕೈಗಾರಿಕಾ ಪ್ರದೇಶಗಳ ಪಕ್ಕ ಕಾರ್ಮಿಕರಿಗೆ ಅನುಕೂಲವಾಗಲು 15-20% ಜಾಗದಲ್ಲಿ ಶ್ರಮಿಕ ನಿವಾಸ ಯೋಜನೆ ಮೂಲಕ ವಸತಿ ನಿರ್ಮಾಣಕ್ಕೆ ಅವಕಾಶ ನೀಡಲಾಗಿದೆ.

### ಕೈಗಾರಿಕೆಗಳಿಗೆ ಉತ್ತೇಜನ

ಜೊತೆಗೆ ಜವಳಿ ನೀತಿ, ಬಳ್ಳಾರಿ ಜೀನ್ಸ್ ಪಾರ್ಕ್‌ಗಳಿಗೆ ಮುಂದಾಗಿದ್ದು, ಏರೋಸ್ಪೇಸ್ ,ರಕ್ಷಣಾ ನೀತಿ ರೂಪಿಸಲಾಗಿದೆ. ದೊಡ್ಡಬಳ್ಳಾಪುರದಲ್ಲಿ 4 ಸಾವಿರ ಎಕರೆಯಲ್ಲಿ 20 ಸಾವಿರ ಕೋಟಿ ಉತ್ಪಾದನಾ ಕ್ಲಸ್ಟರ್ ನಿರ್ಮಾಣಕ್ಕೆ ಅನುಮತಿ ನೀಡಿದ್ದೇವೆ.

ವಿದೇಶಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಲು ಅನಿವಾಸಿ ಭಾರತೀಯರಿಗಾಗಿ ಪ್ರತ್ಯೇಕ ಸಚಿವಾಲಯ ಮಾಡಲಾಗುವುದು. ಆ ಮೂಲಕ ಹೊರಗಿನಿಂದ ಹೂಡಿಕೆಗೆ ಆಸಕ್ತಿ ತೋರುವವರಿಗೆ ಪ್ರೋತ್ಸಾಹ ನೀಡಲಾಗುವುದು ಎಂದು ಅವರು ವಿವರಿಸಿದರು. ನಾವು ಎಐ ಯುಗಕ್ಕೆ ಕಾಲಿಡುತ್ತಿದ್ದೇವೆ. ಆಧುನಿಕ ತಂತ್ರಜ್ಞಾನಕ್ಕೆ ಅನುಗುಣವಾಗಿ ಮುಂದಿನ ಪೀಳಿಗೆಯನ್ನು ತಯಾರು ಮಾಡಲು ಭಾರತದಲ್ಲಿ ಮೊದಲ ಸರ್ಕಾರಿ ಪ್ರಾಯೋಜಿತ ಎಐ ವಿವಿ ಸ್ಥಾಪಿಸಲು ಮುಂದಾಗಿದ್ದೇವೆ. ಜೊತೆಗೆ 6ನೇ ತರಗತಿಯಿಂದ ಮಕ್ಕಳಿಗೆ ಎಐ ಶಿಕ್ಷಣ ನೀಡಲು ತೀರ್ಮಾನಿಸಿದ್ದೇವೆ. ಆರೋಗ್ಯಕರ ರಾಜ್ಯ ನಿರ್ಮಿಸಲು ಎಲ್ಲಾ ತಾಲ್ಲೂಕುಗಳಲ್ಲಿ ಟೆಲಿ ಐಸಿಯು ಸ್ಥಾಪನೆ, ನಶೆ ಮುಕ್ತ ಕರ್ನಾಟಕಕ್ಕೆ ರೈಸ್ ಹಾಗೂ ಬೇಡ ಬ್ರೋ ಎಂಬ ಅಭಿಯಾನ ಮಾಡಲಾಗುತ್ತಿದೆ.




• ಉದಯವಾಹಿನಿ, ಬೆಂಗಳೂರು

ಆರೋಗ್ಯ, ಶಿಕ್ಷಣ, ಜಲ ಭದ್ರತೆ, ಹೂಡಿಕೆ ಮತ್ತು ಆರ್ಥಿಕ ಬಲ, ಬೆಂಗಳೂರು ಅಭಿವೃದ್ಧಿ, ಪ್ರಾದೇಶಿಕ ಸಮತೋಲನ, ಸಾಮಾಜಿಕ ನ್ಯಾಯ, ಬಂಡವಾಳ ಹೂಡಿಕೆ, ಉದ್ಯೋಗಕ್ಕೆ ಆದ್ಯತೆ ನೀಡಿ ಬಲಿಷ್ಠ ಕರ್ನಾಟಕ ನಿರ್ಮಾಣಕ್ಕೆ ನವ ಸಂಕಲ್ಪ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.ಸಿಎಂ ಡಿ ಕೆ ಶಿವಕುಮಾರ್ ಅವರು ಅಧಿಕಾರವಹಿಸಿಕೊಂಡು 100 ದಿನಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಗುರುವಾರ ನಡೆದ ದೃಢ ಕರ್ನಾಟಕದ ಸಂಕಲ್ಪ ಶತಕದ ಪಥ, ಪ್ರಗತಿಯ ರಥ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾನು ಹಾಗೂ ಸಿದ್ದರಾಮಯ್ಯ ಅವರು ನಿಮಗೆ ಕೊಟ್ಟ ಭರವಸೆ ಈಡೇರಿಸಿ, ಬಸವಣ್ಣನವರ ತತ್ವದಂತೆ ನುಡಿದಂತೆ ನಡೆದಿದ್ದೇವೆ. ದೇಶವೇ ಮೆಚ್ಚುವಂತೆ ಆಡಳಿತ ನೀಡಿದ್ದೇವೆ.

ಈ ರಥವನ್ನು ನಾನು ಒಬ್ಬನೇ ಎಳೆಯುತ್ತಿಲ್ಲ. ಇದು ನಿಮ್ಮ ಸರ್ಕಾರ. ನಾಡಿನ 7ಕೋಟಿ ಜನರ ಸರ್ಕಾರ. ನೀವು ಕೊಟ್ಟ ಶಕ್ತಿ, ನಮ್ಮ ಮೇಲೆ ಇಟ್ಟಿರುವ ನಂಬಿಕೆ, ಎಲ್ಲಾ ವರ್ಗದ ಜನರ ಬದುಕಲ್ಲಿ ಬದಲಾವಣೆ ತರುತ್ತಿದೆ. ಶತಕದ ಪಥದಲ್ಲಿ ಕರ್ನಾಟಕ ಹೆಜ್ಜೆ ಹಾಕುತ್ತಿದ್ದು, ನಾಡಿನ ಅಭಿವೃದ್ಧಿಗೆ ನಾವು ಬದ್ಧವಾಗಿದ್ದೇವೆ. ನಾಡಿನ ನೆಲ, ಜನರ ಶ್ರಮ, ಯುವಕರ ಕನಸೇ ಈ ದೃಢ ಕರ್ನಾಟಕದ ಸಂಕಲ್ಪ ಎಂದು ಹೇಳಿದರು. ಎಲ್ಲಾ 224 ಶಾಸಕರು, 75 ಪರಿಷತ್ ಸದಸ್ಯರು, 28 ಲೋಕಸಭೆ ಸದಸ್ಯರು ಹಾಗೂ 12 ರಾಜ್ಯಸಭೆ ಸದಸ್ಯರು ಒಟ್ಟಾಗಿ ರಾಜ್ಯದ ಪ್ರಗತಿಗೆ ದುಡಿಯಲು ಈ ಸರ್ಕಾರ ಕೆಲಸ ಮಾಡಲಿದೆ. ಯಾರೇ ಸಹಕಾರ ನೀಡಲಿ, ಬಿಡಲಿ.. ನಾವು ಸಂವಿಧಾನ ಬದ್ಧವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡುವುತ್ತೇವೆ ಎಂದು ಮಾತು ನೀಡುತ್ತೇನೆ. ರಾಗ, ದ್ವೇಷ, ಅಸೂಯೆ ಇಟ್ಟುಕೊಳ್ಳದೆ, ಸರ್ವರಿಗೂ ಸಮಪಾಲು, ಸಮಬಾಳು ಎಂದು ಕರ್ನಾಟಕದ ಪ್ರಗತಿಯ ರಥವನ್ನು ಮುನ್ನಡೆಸಲು ನಾನು ನಿಮ್ಮ ಮುಂದೆ ನಿಂತಿರುವೆ ಎಂದು ತಿಳಿಸಿದರು.


ಗ್ರಾಮೀಣ ಭಾಗದಲ್ಲಿರುವ ಮನೆರಹಿತ ಪರಿಶಿಷ್ಟ ಜಾತಿ ,ಪಂಗಡದವರಿಗೆ ಉಚಿತ ಮನೆ ಮತ್ತು ನಿವೇಶನ ನೀಡಲು ಸರ್ಕಾರ ತೀರ್ಮಾನಿಸಿದೆ. ಗ್ರಾಮೀಣ ಭಾಗದಲ್ಲಿ ನಿವೇಶನ ರಹಿತ ಕುಟುಂಬಗಳಿಗೆ 5 ಲಕ್ಷ ನಿವೇಶನಗಳ ವಿತರಣೆ, ಪರಿಶಿಷ್ಟರ ವಸತಿ ಪ್ರದೇಶಗಳಲ್ಲಿ ರಸ್ತೆ, ಚರಂಡಿ ಹಾಗೂ ಬೀದಿ ದೀಪಗಳನ್ನು ಮೇಲ್ದರ್ಜೆಗೆ ಏರಿಸುವುದು, ಎರಡು ವರ್ಷಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯದ 50 ಸಾವಿರ ಯುವಕರಿಗೆ ಸ್ವಯಂ ಉದ್ಯೋಗ ಕಲ್ಪಿಸುವುದು, ಅಲ್ಪಸಂಖ್ಯಾತ ಸಮುದಾಯದ ಯುವಕರಿಗೆ ಉದ್ಯಮಶೀಲತೆ ಮತ್ತು ಕೌಶಲ್ಯ ವೃದ್ಧಿಗೆ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಸಿಎಂ ಭರವಸೆ ನೀಡಿದರು.

## ಪ್ರಯಾಕ್ಟಿಸ್‌ಗಾಗಿ ಶ್ವಾನದ ಕಾಲು ಕಟ್ ಪರಿಶೀಲನೆ ವೇಳೆ ಖಾಸಗಿ ಪಶು ಆಸ್ಪತ್ರೆಯ ಕರ್ಮಕಾಂಡ ಬಯಲು

• ಉದಯವಾಹಿನಿ, ಬೆಂಗಳೂರು

ಪ್ರಯಾಕ್ಟಿಸ್‌ಗಾಗಿ ಶ್ವಾನದ ಕಾಲು ಕತ್ತರಿಸಿ, ಅನಸ್ತೇಶಿಯಾ ನೀಡದೇ ಪ್ರಾಣಿಗಳ ಪ್ರಯೋಗ ನಡೆಸುತ್ತಿರುವ ಖಾಸಗಿ ಪಶು ಆಸ್ಪತ್ರೆಯ ಕರ್ಮಕಾಂಡ ಇದೀಗ ಬಯಲಾಗಿದೆ. ದೊಡ್ಡಕನ್ನೆಲ್ಲಿಯಲ್ಲಿ ಕಳೆದ 4 ವರ್ಷದಿಂದ ಅನುಮತಿಯಿಲ್ಲದೇ ಕಾರ್ಯನಿರ್ವಹಿಸುತ್ತಿದ್ದ ಖಾಸಗಿ ಪಶು ಆಸ್ಪತ್ರೆಗೆ ಅಧಿಕಾರಿಗಳು ತೆರಳಿ, ಪರಿಶೀಲನೆ ನಡೆಸಿದಾಗ ಹಿಂಸಾಚಾರ ನಡೆಸುತ್ತಿರುವುದು ಬಯಲಾಗಿದೆ.

ಈ ಆಸ್ಪತ್ರೆ ಬೋರ್ಡಿಂಗ್, ಕೆಎಡಬ್ಲ್ಯುಬಿ ಸೇರಿದಂತೆ ಯಾವುದೇ ಅನುಮತಿ ಇಲ್ಲದೇ ಕಾರ್ಯ ನಿರ್ವಹಿಸುತ್ತಿದೆ. ಅಧಿಕಾರಿಗಳು ಪರಿಶೀಲನೆ ನಡೆಸಿದಾಗ, ಪ್ರಾಣಿಗಳಿಗೆ ಅನಸ್ತೇಶಿಯಾ ನೀಡದೇ ಪ್ರಯೋಗ ನಡೆಸಿರುವುದು ಹಾಗೂ ಪ್ರಾಕ್ಟೀಸ್ ಗಾಗಿ ನಾಯಿಯ ಕಾಲು ಕಟ್ ಮಾಡಿರುವುದು ಗೊತ್ತಾಗಿದೆ. ಇನ್ನೂ ಆಸ್ಪತ್ರೆಯಲ್ಲಿ ಅಕ್ರಮವಾಗಿ, ಹಿಂಸಾ ರೂಪದಲ್ಲಿ ಪ್ರಾಣಿಗಳನ್ನ ಇಟ್ಟುಕೊಂಡಿರುವುದು ಬೆಳಕಿಗೆ




ಬಂದಿದೆ. ಜೊತೆಗೆ 12 ನಾಯಿಗಳು, 1 ಬೆಕ್ಕು ಅಸ್ವಸ್ಥ ಸ್ಥಿತಿಯಲ್ಲಿ ಪತ್ತೆಯಾಗಿದೆ. ಅದರಲ್ಲೂ ಒಂದು ನಾಯಿ ಸತ್ತ ಸ್ಥಿತಿಯಲ್ಲಿ ಸಿಕ್ಕಿದೆ.

ಸದ್ಯ ಜಿಬಿಎ ಅಧಿಕಾರಿಗಳು ಆಸ್ಪತ್ರೆ ಬಂದ್ ಮಾಡಿದ್ದು, ಪಶು ಇಲಾಖೆಯಿಂದ ಆಸ್ಪತ್ರೆಗೆ ನೋಟಿಸ್ ನೀಡಿದ್ದಾರೆ. ಈ ಸಂಬಂಧ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ವಿದ್ಯಾರ್ಥಿ ಮಂಜುನಾಥ್ ಮತ್ತು ಖಾಸಗಿ ಆಸ್ಪತ್ರೆ ವೈದ್ಯ ಆಸೀಫ್ ವಿರುದ್ಧ ಎಫ್ಐಆರ್ ದಾಖಲಾಗಿದೆ.

## ಕೆಲಸ ಶೂನ್ಯ, ಪ್ರಚಾರ ಭರಪೂರ, ಯಾವ ಪುರುಷಾರ್ಥಕ್ಕೆ ಈ ಸಂಭ್ರಮ

• ಉದಯವಾಹಿನಿ, ಬೆಂಗಳೂರು

ಇದು ಶತದಿನೋತ್ಸವವಲ್ಲ, ಸಾಧನೆಯ ಶೂನ್ಯತೆಯನ್ನು ದೀಪಾಲಂಕಾರದ ಹಿಂದೆ ಮುಚ್ಚುವ ವ್ಯರ್ಥ ಪ್ರದರ್ಶನ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಅವರು ರಾಜ್ಯ ಸರ್ಕಾರದ ನೂರು ದಿನಗಳ ಕಾರ್ಯಕ್ರಮದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಈ ಸಂಬಂಧ ಎಕ್ಸ್ ಪೋಸ್ಟ್ ಮಾಡಿರುವ ಅವರು, ಸಾಧನೆಯ ಖಾತೆ ಖಾಲಿ. ಸಂಭ್ರಮದ ಖರ್ಚು ಭಾರಿ. ಯಾವ ಸಾಧನೆಗೆ ಈ ಸಂಭ್ರಮ ಯಾವ ಸಾಧನೆಗೆ ಈ ಸಡಗರ ನಾಚಿಕೆಯಾಗಬೇಕು, ಸಿಎಂ ಡಿ.ಕೆ.ಶಿವಕುಮಾರ್ ಅವರೇ. ಆದರೆ ನಿಮ್ಮ ಭಂಡತನವನ್ನು ಮಾತ್ರ ಮೆಚ್ಚಲೇಬೇಕು.

100 ದಿನಗಳ ಆಡಳಿತಕ್ಕೆ ಬ್ಯಾಂಕ್ವೆಟ್ ಹಾಲ್, ಭರ್ಜರಿ ವೇದಿಕೆ, ವಿದ್ಯುತ್ ದೀಪಾಲಂಕಾರ, ಕೋಟ್ಯಂತರ ರೂಪಾಯಿಗಳ ಪ್ರಚಾರ. ಇಷ್ಟೆಲ್ಲಾ ಸಂಭ್ರಮ ಸಡಗರ ಯಾವ ಪುರುಷಾರ್ಥಕ್ಕೆ ಯಾವ ಸಾಧನೆಗೆ ಎಂದು ಟೀಕಾಪ್ರಹಾರ ನಡೆಸಿದ್ದಾರೆ. ಜನರಿಗೆ ತೋರಿಸಲು ಒಂದೇ ಒಂದು ದೊಡ್ಡ ಸಾಧನೆಯೂ ಇಲ್ಲದಿದ್ದಾಗ, ವೈಫಲ್ಯಗಳನ್ನೇ ಸಾಧನೆಗಳೆಂದು ಬಿಂಬಿಸಲು ಈ ಸಂಭ್ರಮವೇ? ರಾಜ್ಯದ ವಾಸ್ತವ ಚಿತ್ರಣ, ಪ್ರತಿಯೊಂದು ವರ್ಗಕ್ಕೂ ದ್ರೋಹ. ಮಹಿಳೆಯರು ಗೃಹಲಕ್ಷ್ಮಿಯ ಹಣಕ್ಕಾಗಿ ತಿಂಗಳುಗಟ್ಟಲೆ ಕಾಯುವ, ಕಚೇರಿ ಬ್ಯಾಂಕ್‌ಗಳ ಬಾಗಿಲು ತಟ್ಟುವ ಪರಿಸ್ಥಿತಿ. ಯುವಜನತೆ ಉದ್ಯೋಗ ಸಿಗಬೇಕಾದರೆ ಅರ್ಹತೆಗಿಂತ ಲಂಚವೇ ಮುಖ್ಯ ಎನ್ನುವಂತಹ ಲಜ್ಜೆಗೇಡಿತನದ ಆಡಳಿತ. ಒಂದೇ ದಿನಕ್ಕೆ ಹರಿದುಹೋಗುವ ಕಳಪೆ ಶೂಸಾಕ್ಸ್. ಬೆಳೆನಷ್ಟದಿಂದ ಕಂಗಾಲಾದ ಅನ್ನದಾತನಿಗೆ ಬರ ಪರಿಹಾರವೂ ಇಲ್ಲ, ವೃದ್ಧರು, ವಿಧವೆಯರು, ಅಂಗವಿಕಲರಿಗೆ ಆಸರೆಯಾಗಿದ್ದ ಪಿಂಚಣಿಗೂ ಕತ್ತರಿ. ದಿನಬಳಕೆಯ ವಸ್ತುಗಳ ಬೆಲೆ ಏರಿಕೆ, ತೆರಿಗೆಗಳ ಹೊರೆಯಿಂದ ಶ್ರೀಸಾಮಾನ್ಯನ ಬದುಕೇ ದುಬಾರಿ. ಬೆಂಗಳೂರು ರಸ್ತೆಯಲ್ಲಿ ಗುಂಡಿ, ರಸ್ತೆಯಂಚಿನಲ್ಲಿ ಕಸದ ರಾಶಿ ಹೇಳಿದ್ದು ಬ್ರ್ಯಾಂಡ್ ಬೆಂಗಳೂರು, ಕೊಟ್ಟಿದ್ದು ಬ್ರೋಕನ್ ಬೆಂಗಳೂರು. ಇದೇನಾ 100 ದಿನಗಳ ಸಾಧನೆ ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

# ರಾಜಧಾನಿ ಬೆಂಗಳೂರು ಶಿಸ್ತು, ಸಂಯಮವಿಲ್ಲದ ವಾಹನ ಸಂಚಾರ, ಪ್ರಾಣಕ್ಕೆ ಸಂಚಕಾರ

## ಬೆಂಗಳೂರು ಎಂದಾಕ್ಷಣ ಥಟ್ ಅಂತ ನೆನಪಿಗೆ ಬರುವುದು ಸಂಚಾರ ದಟ್ಟಣೆ. ನಗರದ ಯಾವುದೇ ರಸ್ತೆಗಳಲ್ಲಿ ಸಂಚರಿಸಿದರೂ ಟ್ರಾಫಿಕ್ ಜಾಮ್‌ಜಾಮ್

• ಉದಯವಾಹಿನಿ, ಬೆಂಗಳೂರು

ಈ ಸಿಲಿಕಾನ್‌ಸಿಟಿಯಲ್ಲಿ ದಿನದಿಂದ ದಿನಕ್ಕೆ ವಾಹನಗಳ ಸಂಖ್ಯೆ ಹೆಚ್ಚುತ್ತಿರುವ ಬೆನ್ನಲ್ಲೇ ಸಂಚಾರ ನಿಯಮಗಳ ಉಲ್ಲಂಘನೆಯ ಸಂಖ್ಯೆಗಳೂ ಆತಂಕಕಾರಿ ಮಟ್ಟದಲ್ಲಿ ಏರುತ್ತಿವೆ.ಸಿಗ್ನಲ್ ಜಂಪ್, ಹೆಲ್ಮೆಟ್ ಹಾಕಿಕೊಳ್ಳದೇ ಚಾಲನೆ, ನೋ ಪಾರ್ಕಿಂಗ್ ಮತ್ತು ಫುಟ್‌ಪಾತ್‌ಗಳಲ್ಲಿ ವಾಹನಗಳ ನಿಲುಗಡೆ, ಮೊಬೈಲ್ ಬಳಕೆ, ಟ್ರಿಪಲ್ ರೈಡಿಂಗ್, ಅತಿ ವೇಗ ಮತ್ತು ಅಜಾಗರೂಕ ಚಾಲನೆ, ಪಾದಚಾರಿ ಮಾರ್ಗಗಳಲ್ಲಿ ವಾಹನ ಚಾಲನೆ ಸೇರಿದಂತೆ 40ಕ್ಕೂ ಹೆಚ್ಚು ಸಂಚಾರ ಅಪರಾಧ ಪ್ರಕರಣಗಳಿವೆ. ಇವುಗಳಲ್ಲಿ ಅತಿ ವೇಗ ಮತ್ತು ಅಜಾಗರೂಕ ಚಾಲನೆ ಮತ್ತು ಫುಟ್‌ಪಾತ್‌ಗಳಲ್ಲಿ ವಾಹನ ಚಾಲನೆ ವರ್ಷದಿಂದ ವರ್ಷಗಳಿಗೆ ಹೆಚ್ಚಾಗುತ್ತಿವೆ.

ಅತ್ಯಂತ ಅಪಾಯಕಾರಿ ಚಾಲನೆ ಇದು. ರಾಜಧಾನಿ ಬೆಂಗಳೂರು ನಗರದಲ್ಲಿ ಮೈಸೂರು ನಗರದಲ್ಲಿ ಇರುವಂತೆ ವಿಶಾಲ ರಸ್ತೆಗಳಿಲ್ಲ. ಫುಟ್‌ಪಾತ್‌ಗಳಂತೂ ಇಲ್ಲವೇ ಇಲ್ಲ. ಕಿರಿದಾಗಿ ಇರುವ ಫುಟ್‌ಪಾತ್‌ಗಳೂ ಸಹ ಸರಿಯಾಗಿ ಇಲ್ಲ. ಹಳ್ಳ, ದಿಣ್ಣೆ ಮತ್ತು ಗುಂಡಿಗಳಿಂದ ಕೂಡಿವೆ. ಈ ರಸ್ತೆಗಳಲ್ಲಿ ಪಾದಚಾರಿಗಳು ನಡೆದು ಹೋಗುವುದೇ ಕಷ್ಟ. ನಗರದ ಬಹುತೇಕ ಕಡೆಗಳಲ್ಲಿ ಸಿಗ್ನಲ್‌ಗಳಿವೆ. ಈ ಸಿಗ್ನಲ್‌ನಿಂದ ಬಹಳ ಹಿಂದೆ ನಿಂತಿರುವವರು ಬೇಗ ಹೋಗಬೇಕೆಂದು ಫುಟ್‌ಪಾತ್ ಮೇಲೆ ವಾಹನ ಹತ್ತಿಸಿ ಚಾಲನೆ ಮಾಡಿಕೊಂಡು ಮುಂದೆ ಚಲಾಯಿಸುತ್ತಾರೆ. ಇದರಲ್ಲಿ ದ್ವಿಚಕ್ರ ವಾಹನ ಸವಾರರೇ ಹೆಚ್ಚು.ಫುಟ್‌ಪಾತ್‌ಗಳನ್ನು ಮೂಲತಃ ಪಾದಚಾರಿಗಳ



ಸುರಕ್ಷಿತ ಸಂಚಾರಕ್ಕಾಗಿ ನಿರ್ಮಿಸ ಲಾಗಿದೆಯೇ ಹೊರತು ವಾಹನ ಸವಾರರಿಗಲ್ಲ ಎಂಬುದನ್ನು ಪ್ರತಿಯೊಬ್ಬ ಸವಾರರು ಅರಿತು ಕೊಳ್ಳಬೇಕು.ಸಂಚಾರದಟ್ಟಣೆ ಬೆಂಗಳೂರು ನಗರದ ಪ್ರಮುಖ ಸಮಸ್ಯೆ ಎಂಬುದು ನಿಜ. ಆದರೆ ಕೆಲವು ನಿಮಿಷಗಳನ್ನು ಉಳಿಸುವ ಉದ್ದೇಶದಿಂದ ಫುಟ್‌ಪಾತ್ ಮೇಲೆ ವಾಹನ ಚಲಾಯಿ ಸುವುದು ಘನಘೋರ ಅಪರಾಧ.ಬಹುತೇಕ ರಸ್ತೆ ಮತ್ತು ಸರ್ಕಲ್‌ಗಳಲ್ಲಿ ಪೊಲೀಸರು ಇಲ್ಲ ಎಂದು ಕೆಲವು ಸವಾರರು ವಾಹನಗಳನ್ನು ಫುಟ್‌ಪಾತ್ ಮೇಲೆ ಚಲಾಯಿಸಿಕೊಂಡು ಹೋಗುವುದು ಬೆಂಗಳೂರು ನಗರದಲ್ಲಿ ಸರ್ವೇಸಾಮಾನ್ಯ ವಾಗಿದೆ.ಅಯ್ಯೋ ಸ್ವಾಮಿ ನಗರದ ಬಹುತೇಕ ರಸ್ತೆ ಮತ್ತು ಸರ್ಕಲ್‌ಗಳಲ್ಲಿ ಸಂಚಾರ ನಿಯಮಗಳ ಉಲ್ಲಂಘನೆಯನ್ನು ಪತ್ತೆ ಹಚ್ಚಲೆಂದೇ ನಗರ ಸಂಚಾರಿ ಪೊಲೀಸರು ಸಿಸಿ ಕ್ಯಾಮೆರಾ, ಎಐ ಆಧಾರಿತ ಎಂಎನ್‌ಪಿಆರ್ ಕ್ಯಾಮೆರಾಗಳು ಹಾಗೂ ಇನ್ನಿತರ ತಂತ್ರಜ್ಞಾನಾಧರಿತ ಕ್ಯಾಮೆರಾಗಳನ್ನು ಅಳವಡಿಸಿದ್ದಾರೆ. ಈ ಕ್ಯಾಮೆರಾಗಳು ವೇಗದ ಮಿತಿ ಹಾಗೂ ಇನ್ನಿತರ ನಿಯಮ ಉಲ್ಲಂಘನೆಯಾದ ತಕ್ಷಣವೇ ಫೋಟೊ ಸಹಿತ ದಾಖಲಿಸಿಕೊಳ್ಳುತ್ತವೆ. ಜೂನ್ 2025 ರಲ್ಲಿ 18,887 ಫುಟ್‌ಪಾತ್‌ನಲ್ಲಿ ವಾಹನ ಚಾಲನೆ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಈ ವರ್ಷದ ಮೊದಲ ಏಳು ತಿಂಗಳಿನಲ್ಲಿ 14, 330 ಪ್ರಕರಣಗಳನ್ನು ದಾಖಲಿಸಿ ಕೊಳ್ಳಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಪ್ರಕರಣಗಳ ಸಂಖ್ಯೆ ಎರಡು ಪಟ್ಟಿಗಿಂತ ಹೆಚ್ಚು ದಾಖಲಾಗುವ ಸಾಧ್ಯತೆಯಿದೆ. ಸಂಚಾರಿ ಪೊಲೀಸರು ರಸ್ತೆ ಬದಿಗಳಲ್ಲಿ ಲೇಸರ್ ಸ್ಪೀಡ್‌ಗಳನ್ನು ಬಳಸಿ ಚಲಿಸುವ ವಾಹನಗಳ ವೇಗವನ್ನು ಸ್ಥಳದಲ್ಲೇ ಪರಿಶೀಲಿಸಿ ದಂಡ ವಿಧಿಸುತ್ತಾರೆ.

### ಅಜಾಗರೂಕ ಚಾಲನೆ

ಕೆಲವರು ವಾಹನ ಚಾಲನೆ ಮಾಡುವಾಗ ಎಲ್ಲೋ ಯೋಚನೆ ಮಾಡುತ್ತಿರುತ್ತಾರೆ ಮತ್ತೆ ಕೆಲವರು ಸಹ ಪ್ರಯಾಣಿಕರ ಜೊತೆ ಹರಟೆ ಹೊಡೆಯುತ್ತಾ ಕೇಕೆ ಹಾಕುತ್ತಾರೆ. ಕಿವಿಗೆ ಬ್ಲೂಟೂತ್, ಈಯರ್ ಫೋನ್ ಹಾಕಿಕೊಂಡು ಮಾತನಾಡುತ್ತಾ ಅಥವಾ ಹಾಡುಗಳನ್ನು ಕೇಳಿಕೊಂಡು ಚಾಲನೆ ಮಾಡುತ್ತಾರೆ. ಈ ರಸ್ತೆ ಯಲ್ಲಿ ನಾನೊಬ್ಬನೇ ವಾಹನ ಚಲಾ ಯಿಸುತ್ತಿರುವುದು ಎಂಬ ಭ್ರಮೆ ಯಲ್ಲಿ ಇರುತ್ತಾರೆ.ಇಂತಹ ಅಜಾಗರೂಕ ಚಾಲನೆ ಚಾಲಕ/ಸವಾರನನ್ನಷ್ಟೇ ಅಲ್ಲದೆ ಆ ರಸ್ತೆಯಲ್ಲಿ ಸಂಚರಿಸುತ್ತಿರುವ ಇನ್ನಿತರ ವಾಹನಗಳ ಚಾಲಕರು/ಸವಾರರಿಗೆ ಅಪಾಯ ಉಂಟಾಗುತ್ತದೆ.

ಪದೇಪದೇ ವೇಗದ ಮಿತಿ ಮೀರಿದರೆ ಅಥವಾ ಅಪಾಯಕಾರಿ ರೀತಿಯಲ್ಲಿ ವಾಹನ ಚಲಾಯಿಸಿದರೆ ದಂಡದ ಮೊತ್ತ ಹೆಚ್ಚಾಗುವುದು. ಜೊತೆಗೆ ಚಾಲನಾ ಪರವಾನಗಿಯನ್ನೂ ಸಹ ಅಮಾನತು ಮಾಡಲಾಗುತ್ತದೆ. ಕೃಷ್ಣ ಬೈರೇಗೌಡರು ಬೆಂಗ ಳೂರು ನಗರಾಭಿವೃದ್ಧಿ ಸಚಿವರಾಗಿ ಅಧಿಕಾರ ವಹಿಸಿ ಕೊಂಡ ನಂತರ ನಗರದಲ್ಲಿ ಒತ್ತುವರಿಯಾಗಿದ್ದ ಬಹುತೇಕ ಫುಟ್‌ಪಾತ್‌ಗಳನ್ನು ತೆರವುಗೊಳಿಸಿದ್ದಾರೆ.

ಈ ಹಿಂದೆ ಇದ್ದ ಅಂಗಡಿ, ಮಿನಿ ಹೋಟೆಲ್‌ಗಳು, ಬೂತ್‌ಗಳು, ಟ್ರಾನ್‌ಸ್ಫಾರಂಗಳು ಸೇರಿದಂತೆ ಮುಂತಾದವುಗಳನ್ನು ತೆಗೆಸಿದ್ದಾರೆ. ಈಗ ವಿಶಾಲವಾಗಿದೆ ಎಂದು ಫುಟ್‌ಪಾತ್ ಮೇಲೆ ವಾಹನ ಚಲಾಯಿಸಿದರೆ ಎರಡು ಪಟ್ಟಿಗೂ ಹೆಚ್ಚಿನ ದಂಡ ತೆರಬೇಕಾಗುತ್ತದೆ. ಎಚ್ಚರ. ಒಬ್ಬ ವಾಹನ ಸವಾರ/ಚಾಲಕನ ಕೆಲವೇ ನಿಮಿಷಗಳ ಆತುರ ಮತ್ತೊಬ್ಬರ ಜೀವನವನ್ನೇ ಕಸಿದುಕೊಳ್ಳಬಹುದು. ಹೀಗಾಗಿ ಬೆಂಗಳೂರು ನಗರದ ರಸ್ತೆಗಳಲ್ಲಿ ವೇಗಕ್ಕಿಂತ ಸುರಕ್ಷತೆ, ಆತುರಕ್ಕಿಂತ ನಿಯಮಕ್ಕೆ ಹಾಗೂ ವಾಹನಕ್ಕಿಂತ ಮನುಷ್ಯರ ಜೀವನಕ್ಕೆ ಆದ್ಯತೆ ನೀಡಬೇಕಾಗಿದೆ.

**ಈ ದಿನದ ದರ** ಪೆಟ್ರೋಲ್: 110.93₹/L ಡೀಸೆಲ್ : 98.80₹/L ಬಂಗಾರ: ₹ 15,551/Gram 24ct ₹ 14,255 /Gram 22ct ಬೆಳ್ಳಿ: ₹255.00/

# ಹಸಿರೂ ಹೋಯ್ತು ಹಸನೂ ಹೋಯ್ತು: ಬಿಸಿಲ ನಾಡಲ್ಲಿ ಅನ್ನದಾತ ಅನಾಥ!

## ಕೃಷಿಯನ್ನೇ ನಂಬಿಕೊಂಡಿರುವ ಸಾವಿರಾರು ಕುಟುಂಬಗಳ ಬದುಕು ಮಳೆಯ ಮೇಲೆ ಅವಲಂಬಿತವಾಗಿದೆ

• ಇಲಿಯಾಸ್ ಪಟೇಲ್, ಬಳಗಾನೂರ ರಾಜ್ಯ ವಿಶೇಷ ವರದಿಗಾರರು

• **ಉದಯವಾಹಿನಿ, ಯಾದಗಿರಿ:**

'ಆಷಾಢ ಕಳೆದು ಶ್ರಾವಣ ಬಂದರೂ ಮೋಡಗಳು ಕರಗಲಿಲ್ಲ... ಮುಗಿಲತ್ತ ಮುಖ ಮಾಡಿ ಕುಳಿತ ರೈತನ ಕಣ್ಣಲ್ಲಿ ಕಣ್ಣೀರು ಆರಲಿಲ್ಲ...' ಇದು ಜಿಲ್ಲೆಯಾದ್ಯಂತ ಕೃಷಿಭೂಮಿಯಲ್ಲಿ ಇಂದು ಎದ್ದು ಕಾಣುತ್ತಿರುವ ಕರುಣಾಜನಕ ದೃಶ್ಯ.

ರಾಜ್ಯಾದ್ಯಂತ ಈ ಬಾರಿ ಮುಂಗಾರು ಮಳೆ ಸಂಪೂರ್ಣವಾಗಿ ಕೈಕೊಟ್ಟಿದ್ದು, ಕಲ್ಯಾಣ ಕರ್ನಾಟಕದ ಬಿಸಿಲ ನಾಡು ಯಾದಗಿರಿಯಲ್ಲಿ ಅಭಾವ ಪರಿಸ್ಥಿತಿ ತೀವ್ರ ಸ್ವರೂಪ ಪಡೆದುಕೊಂಡಿದೆ. ಸಾಲ ಸೂಲ ಮಾಡಿ ಭೂಮಿಗೆ ಸುರಿದ ಬಂಡವಾಳವೆಲ್ಲ ಕಣ್ಣೆದುರೇ ಬೂದಿಯಾಗುತ್ತಿದ್ದು, ಅನ್ನದಾತನ ಬದುಕು ಸಂಪೂರ್ಣ ದುಸ್ತರವಾಗಿದೆ.

★ಮಳೆಯಿಲ್ಲದೆ ಒಣಗಿದ ಪೈರು
★ಆಸರೆಯಾಗದ ಅಂತರ್ಜಲ
★ಹೆಚ್ಚಿದ ಸಾಲದ ಹೊರೆ
★ಬರ ಘೋಷಣೆಗೆ ಆಗ್ರಹ

**ಬಿತ್ತಿದ ಬೆಳೆ ಶೂನ್ಯ: ಕರಕಲಾದ ಹಸಿರು ಹೊಲಗಳು** ಮುಂಗಾರು ಆರಂಭದ ಒಂದೆರಡು ಸಾಧಾರಣ ಮಳೆಗೆ ನಂಬಿಕೆ ಇಟ್ಟು ಜಿಲ್ಲೆಯ ರೈತರು ಲಕ್ಷಾಂತರ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ, ತೊಗರಿ, ಹೆಸರು ಹಾಗೂ ಶೇಂಗಾ ಬಿತ್ತನೆ ಮಾಡಿದ್ದರು. ಆದರೆ ಬಿತ್ತನೆ ಮುಗಿದ ಬೆನ್ನಲ್ಲೇ ವರುಣದೇವ ಮಾಯವಾಗಿದ್ದಾನೆ.



ಉದಯವಾಹಿನಿ ಚಿತ್ರ


ಪ್ರಮುಖವಾಗಿ ತೊಗರಿ ಉಗ್ರಾಣ ಎಂದೇ ಹೆಸರುವಾಸಿಯಾದ ಈ ಭಾಗದಲ್ಲಿ, ಮೊಣಕಾಲೆತ್ತರ ಬೆಳೆದು ನಿಂತಿದ್ದ ತೊಗರಿ ಹಾಗೂ ಹತ್ತಿ ಗಿಡಗಳು ತೇವಾಂಶದ ಕೊರತೆಯಿಂದಾಗಿ ಹಳದಿ ಬಣ್ಣಕ್ಕೆ ತಿರುಗಿ ಒಣಗುತ್ತಿವೆ. ಹೊಲಗಳಲ್ಲಿ ಹಸಿರು ಕಂಗೊಳಿಸಬೇಕಿದ್ದ ಜಾಗದಲ್ಲಿ ಈಗ ಕೇವಲ ಒಣಗಿದ ಕಡ್ಡಿಗಳು ಮಾತ್ರ ಶೇಷವಾಗಿವೆ. ಭೂಮಿ ಬಿರುಕು ಬಿಟ್ಟಿದ್ದು, ಪೈರುಗಳನ್ನು ಉಳಿಸಿಕೊಳ್ಳಲು ನೀರಿಲ್ಲದೆ ರೈತರು ಕೈಚೆಲ್ಲಿ ಕುಳಿತಿದ್ದಾರೆ. ಇನ್ನೊಂದೆಡೆ, ಕೊಳವೆ ಬಾವಿಗಳಲ್ಲಿಯೂ ಅಂತರ್ಜಲ ಮಟ್ಟ ಕುಸಿದಿದ್ದು, ಬೆಳೆಗಳಿಗೆ ನೀರುಣಿಸಲು ಸಾಧ್ಯವಾಗದೆ ಪಂಪ್ ಸೆಟ್‌ಗಳು ನಿರುಪಯುಕ್ತವಾಗಿವೆ.

**ಮಳೆಯೂ ಇಲ್ಲ ಬೆಳೆಯೂ ಇಲ್ಲ: ಬರಿದಾಯ್ತು ಭೂಮಿ, ಕರಗಿತು**

**ಖಾಸಗಿ ಸಾಹುಕಾರರ ಬಳಿ ಶೇಕಡಾ ಮೂರರ ಬಡ್ಡಿಗೆ ಸಾಲ ತಂದು, ಎಕರೆಗೆ 20 ಸಾವಿರ ರೂಪಾಯಿ ಖರ್ಚು ಮಾಡಿ ಗೊಬ್ಬರ, ಬಿತ್ತನೆ ಬೀಜ ಹಾಕಿದ್ದೆವು. ಇನ್ನೇನು ಬೆಳೆ ಕೈಗೆ ಬರಬೇಕು ಅನ್ನುವಷ್ಟರಲ್ಲಿ ಮಳೆರಾಯ ಸಂಪೂರ್ಣ ಮಾಯವಾದ. ಕಳೆದ ಒಂದು ತಿಂಗಳಿನಿಂದ ಹನಿ ಮಳೆಯೂ ಇಲ್ಲದೆ, ಹೊಲದಲ್ಲಿದ್ದ ತೊಗರಿ, ಹತ್ತಿ ಎಲ್ಲಾ ಒಣಗಿ ಸೌದೆಯಂತಾಗಿದೆ. ಮಾಡಿದ ಸಾಲ ತೀರಿಸುವುದು ಹೇಗೆ, ಕುಟುಂಬ ಸಾಕುವುದು ಹೇಗೆ? ನಮ್ಮ ಹೊಟ್ಟೆ ಸೀಳಿದರೆ ಬರಿ ಕಣ್ಣೀರು ಮಾತ್ರ ಸಿಗುತ್ತದೆ. ಸರ್ಕಾರವೇ ನಮಗೆ ದಾರಿ ತೋರಿಸಬೇಕು. - ಸಂಕಷ್ಟಕ್ಕೊಳಗಾದ ರೈತರು...**

**ಬರಪೀಡಿತ ಪ್ರದೇಶವೆಂದು ಘೋಷಿಸಲು ಆಗ್ರಹ**

ಮಳೆಯ ಅಭಾವದಿಂದಾಗಿ ಕೇವಲ ಯಾದಗಿರಿ ಮಾತ್ರವಲ್ಲದೆ ನೆರೆಹೊರೆಯ ಜಿಲ್ಲೆಗಳಲ್ಲೂ ಬೆಳೆ ಶೇ. 70ಕ್ಕಿಂತ ಹೆಚ್ಚು ಹಾನಿಗೊಳಗಾಗಿದೆ.



**ರಾಜ್ಯಾದ್ಯಂತ ಮುಂಗಾರು ಸಂಪೂರ್ಣ ವಿಫಲವಾಗಿದ್ದು, ಹತ್ತಿ, ತೊಗರಿ ಬೆಳೆದ ರೈತರು ಬೀದಿಗೆ ಬಿದ್ದಿದ್ದಾರೆ. ಸರ್ಕಾರ ಕೇವಲ ಎಸಿ ರೂಂನಲ್ಲಿ ಕುಳಿತು ವರದಿ ನೋಡದೆ, ತಕ್ಷಣವೇ ಕಂದಾಯ ಮತ್ತು ಕೃಷಿ ಅಧಿಕಾರಿಗಳನ್ನು ಕ್ಷೇತ್ರಕ್ಕೆ ಕಳುಹಿಸಿ ಜಂಟಿ ಸಮೀಕ್ಷೆ ನಡೆಸಬೇಕು. ಇಡೀ ಯಾದಗಿರಿ ಜಿಲ್ಲೆಯನ್ನು 'ಬರಪೀಡಿತ' ಎಂದು ಘೋಷಿಸಿ, ಎಕರೆಗೆ ಕನಿಷ್ಠ 30,000 ರೂಪಾಯಿ ಪರಿಹಾರ ಧನ ನೀಡಬೇಕು. ಜೊತೆಗೆ ರೈತರ ಕೃಷಿ ಸಾಲಗಳನ್ನು ತಕ್ಷಣವೇ ಮನ್ನಾ ಮಾಡಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ರೂಪಿಸಲಾಗುವುದು.**
**-ಕೋಡಿಹಳ್ಳಿ ಚಂದ್ರಶೇಖರ, ರಾಜ್ಯಾಧ್ಯಕ್ಷರು( ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ,)**

ಇದರಿಂದಾಗಿ ಕೃಷಿ ಕಾರ್ಮಿಕರಿಗೆ ಕೆಲಸವಿಲ್ಲದೆ ಗುಳೆ ಹೋಗುವ ಭೀತಿ ಎದುರಾಗಿದೆ. ಸರ್ಕಾರ ತಕ್ಷಣವೇ ತಜ್ಞರ ಹಾಗೂ ಕೃಷಿ ಅಧಿಕಾರಿಗಳ ತಂಡವನ್ನು ಕಳುಹಿಸಿ ಬೆಳೆ ಹಾನಿ ಸಮೀಕ್ಷೆ ನಡೆಸಬೇಕು. ಜಿಲ್ಲೆಯನ್ನು ತಕ್ಷಣವೇ 'ಬರಪೀಡಿತ ಜಿಲ್ಲೆ' ಎಂದು ಘೋಷಿಸಿ, ಸಂಕಷ್ಟದಲ್ಲಿರುವ ರೈತರಿಗೆ ಸೂಕ್ತ ಪರಿಹಾರ ಧನ ವಿತರಿಸಬೇಕು ಹಾಗೂ ಕೃಷಿ ಸಾಲಗಳನ್ನು ಮನ್ನಾ ಮಾಡಿ ಅನ್ನದಾತನ ಬೆನ್ನಿಗೆ ನಿಲ್ಲಬೇಕು ಎಂದು ಸ್ಥಳೀಯ ರೈತ ಸಂಘಟನೆಗಳು ಒತ್ತಾಯಿಸಿವೆ.

ಮೋಡಗಳತ್ತ ಆಸೆಯ ಕಣ್ಣುಗಳಿಂದ ನೋಡುತ್ತಿರುವ ರೈತ ಸಮುದಾಯಕ್ಕೆ ಈಗ ಸರ್ಕಾರದ ತುರ್ತು ನೆರವೇ ಏಕೈಕ ಆಸರೆಯಾಗಿದೆ.

# ಗೃಹರಕ್ಷಕ ದಳದ ಕಟ್ಟಡ ನಿರ್ಮಾಣಕ್ಕೆ 10 ಲಕ್ಷ ಅನುದಾನ

• **ಉದಯವಾಹಿನಿ, ನ್ಯಾಮತಿ:**

'ಸಮಾಜದಲ್ಲಿ ನಡೆಯುವ ಯಾವುದೇ ಕಾರ್ಯಕ್ರಮಗಳಲ್ಲಿ ಪೊಲೀಸರೊಂದಿಗೆ ಸರಿಸಮನಾಗಿ ಗೃಹರಕ್ಷಕ ದಳದ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ' ಎಂದು ಶಾಸಕ ಡಿ.ಜಿ.ಶಾಂತನಗೌಡ ಹೇಳಿದರು.

ಪಟ್ಟಣದ ಗೃಹ ರಕ್ಷಕದಳದ ಪ್ಲಟೂನ್ ಕಮಾಂಡರ್ ಎಂ. ರಾಘವೇಂದ್ರ ಅವರು ರಾಷ್ಟ್ರಪತಿಗಳ ಶ್ಲಾಘನೀಯ ಸೇವಾ ಪದಕ ಪುರಸ್ಕಾರಕ್ಕೆ ಭಾಜನರಾದ ಕಾರಣ ತಾಲ್ಲೂಕಿನ ಗೃಹ ರಕ್ಷಕ ದಳದ ವತಿಯಿಂದ ಹಮ್ಮಿಕೊಂಡಿದ್ದ ಸಾರ್ವಜನಿಕ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಗೃಹರಕ್ಷಕ ದಳದ ಕಚೇರಿ ನಿರ್ಮಾಣ ಕಾಮಗಾರಿ ಕೈಗೊಂಡರೆ ಶಾಸಕರ ಅನುದಾನದಲ್ಲಿ 10 ಲಕ್ಷ ನೀಡಲಾಗುವುದು' ಎಂದು ಭರವಸೆ ನೀಡಿದರು. ಸ್ವಾಭಿಮಾನಿ ಬಳಗದ ರಾಜ್ಯ ಘಟಕದ ಅಧ್ಯಕ್ಷ ಜಿ.ಬಿ.ವಿನಯಕುಮಾರ ಮಾತನಾಡಿ, 'ಗೃಹರಕ್ಷಕ ದಳದ ಸಿಬ್ಬಂದಿಯ ಕುಟುಂಬಗಳು ಬಡತನದಲ್ಲಿದ್ದು, ಅವರ ಕಷ್ಟಗಳು ಏನು ಎಂಬ ಅರಿವು ನನಗಿದೆ.



ಉದಯವಾಹಿನಿ ಚಿತ್ರ

ಹಾಗಾಗಿ ಗೃಹರಕ್ಷಕ ದಳದ ಸಿಬ್ಬಂದಿಯವರ ವಿದ್ಯಾವಂತ ಮಕ್ಕಳಿಗೆ ಉಚಿತವಾಗಿ ಐಎಎಸ್ ತರಬೇತಿ ನೀಡಲು ಸಿದ್ಧರಿದ್ದು, ಇದರ ಸದುಪಯೋಗಪಡಿಸಿಕೊಳ್ಳಿ' ಎಂದರು.

ದಾವಣಗೆರೆ ಜಿಲ್ಲಾ ಸಮಾದೇಷ್ಟ ಎಸ್.ಎಚ್.ಸುಜಿತ್‌ಕುಮಾರ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರಪತಿಗಳ ಪುರಸ್ಕೃತ ರಾಘವೇಂದ್ರ ಮತ್ತು ಅವರ ಕುಟುಂಬದ ಸದಸ್ಯರನ್ನು ಗೃಹರಕ್ಷಕ ದಳ ಸಿಬ್ಬಂದಿ, ವಿವಿಧ ಸಂಘಟನೆಗಳು, ಸಾರ್ವಜನಿಕರು ಹಾಗೂ ಅಭಿಮಾನಿಗಳು

# ಲಕ್ಷ್ಮೇಶ್ವರದಲ್ಲಿ ಗಣಪತಿ ವಿಸರ್ಜನೆಗೆ ಶಾಶ್ವತ ಹೊಂಡ ನಿರ್ಮಿಸಲು ಆಗ್ರಹ


• **ಉದಯವಾಹಿನಿ, ಲಕ್ಷ್ಮೇಶ್ವರ:**

'ಪಟ್ಟಣದಲ್ಲಿ ಸಾರ್ವಜನಿಕ ಗಣಪತಿ ಮೂರ್ತಿಗಳ ವಿಸರ್ಜನೆಗೆ ಶಾಶ್ವತ ಹಾಗೂ ದೊಡ್ಡ ವಿಸರ್ಜನಾ ಹೊಂಡ ನಿರ್ಮಿಸಿ, ಮೂಲ ಸೌಲಭ್ಯ ಕಲ್ಪಿಸಬೇಕು' ಎಂದು ಆಗ್ರಹಿಸಿ ಲಕ್ಷೇಶ್ವರ ಸಾರ್ವಜನಿಕ ಗಜಾನನೋತ್ಸವ ಮಹಾಮಂಡಳಿ ವತಿಯಿಂದ ಪುರಸಭೆ ಮುಖ್ಯಾಧಿಕಾರಿ ಪಿ.ಕೆ. ಗುಡದಾರೆ ಅವರಿಗೆ ಮನವಿ ಸಲ್ಲಿಸಲಾಯಿತು.

'ಪ್ರತಿವರ್ಷ 18ರಿಂದ 20 ಅಡಿ ಎತ್ತರದ ಗಣಪತಿ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುತ್ತಿದೆ.

ಬೃಹತ್ ಮೂರ್ತಿಗಳ ಮೆರವಣಿಗೆ ಹಾಗೂ ವಿಸರ್ಜನೆ ಸಂದರ್ಭದಲ್ಲಿ ವಿಶೇಷ ಮತ್ತು ಸೂಕ್ತ ವ್ಯವಸ್ಥೆ ಅಗತ್ಯ. ಸಧ್ಯ ಪುರಸಭೆಯಿಂದ ಮೂರ್ತಿಗಳ ವಿಸರ್ಜನೆ ತಾತ್ಕಾಲಿಕವಾದ ಮಣ್ಣಿನ ಹೊಂಡ ನಿರ್ಮಿಸಿದ್ದಾರೆ. ವಿಸರ್ಜನೆ ನಂತರ ಹೊಂಡವನ್ನು ಮಣ್ಣಿನಿಂದ ಮುಚ್ಚಲಾಗುತ್ತದೆ. ಇದು ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುತ್ತಿದೆ. ಹೀಗಾಗಿ ಶಾಶ್ವತ, ವ್ಯವಸ್ಥಿತ ವಿಸರ್ಜನಾ ಹೊಂಡ ನಿರ್ಮಿಸಬೇಕು' ಎಂದು ಮಹಾಮಂಡಳದ ಅಧ್ಯಕ್ಷ ಈರಣ್ಣ ಪೂಜಾರ ಆಗ್ರಹಿಸಿದರು.

'ಹೊಂಡದ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿ ಇಡಬೇಕು.



ಉದಯವಾಹಿನಿ ಚಿತ್ರ

ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಹಾಗೂ ಅಗತ್ಯ ಮೂಲ ಸೌಲಭ್ಯ ಕಲ್ಪಿಸಬೇಕು. ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಿಸಬೇಕು.

ಮೆರವಣಿಗೆಗೆ ಅಡ್ಡಿಯಾಗುವ ರಸ್ತೆ ಬದಿಯ ಗಿಡ ಮರಗಳ ಕೊಂಬೆಗಳನ್ನು ಮುಂಚಿತವಾಗಿ ತೆರವುಗೊಳಿಸಬೇಕು.

ಕೇಬಲ್‌ಗಳು ಅಥವಾ ಇತರೆ ಅಡೆತಡೆಗಳು ಇದ್ದಲ್ಲಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕ್ರಮಕೈಗೊಳ್ಳಬೇಕು' ಎಂದರು. ಗಂಗಾಧರ ಮೆಣಸಿನಕಾಯಿ, ವಿಜಯ ಕುಂಬಾರ, ಮಂಜುನಾಥ ಮಾಗಡಿ, ಅನಿಲ ಮುಳಗುಂದ, ಪ್ರವೀಣ ಬೋಮಲೆ, ಮಹೇಶ ಕಲಘಟಗಿ ಇದ್ದರು.

# ಬಿಜೆಪಿಯ 'ಬಳ್ಳಾರಿ ಚಲೋ'ಗೆ ತೆರೆ : ಗಣಿ ನಗರಿಯಲ್ಲಿ ಬೃಹತ್ ಸಮಾವೇಶ

• **ಉದಯವಾಹಿನಿ, ಬಳ್ಳಾರಿ:**

ರಾಜ್ಯ ಕಾಂಗ್ರೆಸ್ ಸರ್ಕಾರದ ವೈಫಲ್ಯ, ಭ್ರಷ್ಟಾಚಾರ ಹಾಗೂ ಜನವಿರೋಧಿ ನೀತಿಗಳನ್ನು ಖಂಡಿಸಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಹಮ್ಮಿಕೊಂಡಿರುವ 'ಬಳ್ಳಾರಿ ಚಲೋ' ಪಾದಯಾತ್ರೆಯ ಸಮಾರೋಪ ಸಮಾವೇಶಕ್ಕೆ ನಗರದಲ್ಲಿ ನಡೆಯಲಿದೆ. ನಗರದ ಮುನ್ಸಿಪಲ್ ಹೈಸ್ಕೂಲ್ ಮೈದಾನದಲ್ಲಿ ನಡೆಯಲಿರುವ ಬೃಹತ್ ಬಹಿರಂಗ ಸಭೆಗೆ ಜಿಲ್ಲಾಡಳಿತ ಷರತ್ತುಬದ್ಧ ಅನುಮತಿ ನೀಡಿದೆ. ಈ ಹಿನ್ನೆಲೆಯಲ್ಲಿ ಮೈದಾನದಲ್ಲಿ ಬೃಹತ್ ವೇದಿಕೆ ನಿರ್ಮಾಣ, ಅಲಂಕಾರ ಹಾಗೂ ಆಸನ ವ್ಯವಸ್ಥೆ ಮಾಡಲಾಗಿದೆ.

ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್ ಮೋಕಾ ಅವರು ಮೈದಾನಕ್ಕೆ ಭೇಟಿ ನೀಡಿ ಸಿದ್ಧತಾ ಕಾರ್ಯಗಳನ್ನು ಪರಿಶೀಲಿಸಿದರು. ಸಮಾವೇಶಕ್ಕೆ 50 ಸಾವಿರಕ್ಕೂ ಅಧಿಕ ಜನರು ಸೇರುವ ನಿರೀಕ್ಷೆಯಿದ್ದು, ಸಾರ್ವಜನಿಕರು ಹಾಗೂ ಕಾರ್ಯಕರ್ತರಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಸೋಮಶೇಖರ ರೆಡ್ಡಿ ತಿಳಿಸಿದರು. 'ಬಳ್ಳಾರಿ ಚಲೋ' ಪಾದಯಾತ್ರೆಗೆ ಮಾರ್ಗದ ಉದ್ದಕ್ಕೂ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದೆ.

ಕಾಂಗ್ರೆಸ್ ಸರ್ಕಾರದ ಆಡಳಿತದ ಬಗ್ಗೆ ಜನರಲ್ಲಿ ಅಸಮಾಧಾನವಿದ್ದು, ಮುಂದಿನ ವಿಧಾನಸಭಾ



ಉದಯವಾಹಿನಿ ಚಿತ್ರ

ಚುನಾವಣೆಯಲ್ಲಿ ಜನರು ಬಿಜೆಪಿಗೆ ಬೆಂಬಲ ನೀಡಲಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

**ಪ್ರಮುಖರು ಭಾಗಿ:** ಸಮಾವೇಶದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ ಹಾಗೂ ವಿ.ಸೋಮಣ್ಣ, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್ ಮತ್ತು ಬಸವರಾಜ ಬೊಮ್ಮಾಯಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ವಿಧಾನ ಪರಿಷತ್ ವಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಸಚಿವರಾದ ಬಿ. ಶ್ರೀರಾಮುಲು, ಗಾಲಿ ಜನಾರ್ದನ ರೆಡ್ಡಿ, ಸಿ.ಟಿ.ರವಿ ಹಾಗೂ ಸುರೇಶ್ ಕುಮಾರ್ ಸೇರಿದಂತೆ ಹಲವು ಮುಖಂಡರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

**ಷರತ್ತುಗಳ ಪಾಲನೆಗೆ ಸೂಚನೆ:** ಸಮಾವೇಶದ ಹಿನ್ನೆಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಹಾಗೂ ಸಾರ್ವಜನಿಕ ಮತ್ತು ಸರ್ಕಾರಿ ಆಸ್ತಿ ಪಾಸ್ತಿಗೆ ಹಾನಿಯಾಗದಂತೆ ಮುನ್ನೆಚ್ಚರಿಕೆ ವಹಿಸುವಂತೆ ಜಿಲ್ಲಾಧಿಕಾರಿ ಕೆ.ನಾಗೇಂದ್ರ ಪ್ರಸಾದ್ ಅವರು ಸಂಘಟಕರಿಗೆ ಸೂಚಿಸಿದ್ದಾರೆ. ನಗರದಲ್ಲಿ ಅನಧಿಕೃತ ಬ್ಯಾನರ್, ಫ್ಲೆಕ್ಸ್ ಹಾಗೂ ಕಟೌಟ್ ಅಳವಡಿಕೆಗೆ ಅವಕಾಶವಿಲ್ಲ. ಸಮಾವೇಶ ನಡೆಯುವ ಮೈದಾನದ ಆವರಣದಲ್ಲಿ ಮಾತ್ರ ನಿಯಮಾನುಸಾರ ಬ್ಯಾನರ್ ಅಳವಡಿಸಲು ಅನುಮತಿ ನೀಡಲಾಗಿದೆ.

ಹೊರ ಜಿಲ್ಲೆಗಳಿಂದ ಆಗಮಿಸುವ ವಾಹನಗಳಿಂದ ಸಂಚಾರಕ್ಕೆ ತೊಂದರೆಯಾಗದಂತೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಲಾಗಿದೆ. ಧ್ವನಿವರ್ಧಕಗಳ ಬಳಕೆಯಲ್ಲಿ ನಿಗದಿತ ಡೆಸಿಬಲ್ ಮಿತಿ ಹಾಗೂ ಸಮಯದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲಾಡಳಿತ ನಿರ್ದೇಶಿಸಿದೆ. ಸಮಾವೇಶದ ಹಿನ್ನೆಲೆಯಲ್ಲಿ ಮೈದಾನ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಕೈಗೊಳ್ಳಲು ಸಿದ್ಧತೆ ನಡೆಸಿದೆ. ಜಿಲ್ಲಾಡಳಿತದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಎಚ್ಚರಿಸಿದ್ದಾರೆ.

# 2ನೇ ದಿನವೂ ಮುಂದುವರೆದ ಶೋಧ

• **ಉದಯವಾಹಿನಿ, ಬೆಳಗಾವಿ:**

ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಮತ್ತು ಅವರ ಆಪ್ತರ ಮನೆಗಳಲ್ಲಿ ಗುರುವಾರವೂ ಸಹ ಜಾರಿ ನಿರ್ದೇಶನಾಲಯ (ಇ.ಡಿ)ದ ಅಧಿಕಾರಿಗಳು ಶೋಧ ಕಾರ್ಯ ಮುಂದುವರೆಸಿದ್ದಾರೆ.

ಗೋಕಾಕಿನ ಸಚಿವ ಸತೀಶ ಜಾರಕಿಹೊಳಿ ನಿವಾಸ, ಬಾಮೈದ ಅಬಕಾರಿ ಇಲಾಖೆ ಅಪರ ಆಯುಕ್ತ ಡಾ. ವೈ. ಮಂಜುನಾಥ ಬೆಳಗಾವಿ ನಿವಾಸ, ಸತೀಶ ಜಾರಕಿಹೊಳಿ ಆಪ್ತ ಡಾ. ಗಿರೀಶ್ ಸೋನವಾಲ್ಕರ್ ಮನೆಯಲ್ಲಿ ಇ.ಡಿ ಅಧಿಕಾರಿಗಳು ನಿನ್ನೆ ಬೆಳಗ್ಗೆಯಿಂದ ದಾಖಲೆಗಳ ಪರಿಶೀಲನೆ ನಡೆಸಿ, ಇಂದು ಮುಕ್ತಾಯಗೊಳಿಸಿದ್ದಾರೆ.

ಸತೀಶ ಜಾರಕಿಹೊಳಿ ಅವರ ಆಪ್ತರಾದ ವಿಠ್ಠಲ ಪರಸನ್ನವರ, ರಾಜು ಧರಗಶೆಟ್ಟಿ, ಮಲಗೌಡ ಪಾಟೀಲ ನಿವಾಸದ ಮೇಲಿನ ಇ.ಡಿ ದಾಳಿ ಮುಕ್ತಾಯವಾಗಿದ್ದು, ಇಲ್ಲಿ ಸತೀಶ ಅವರಿಗೆ ಸಂಬಂಧಿಸಿದ ಯಾವೆಲ್ಲಾ ದಾಖಲೆಗಳು ಸಿಕ್ಕಿವೆ ಎಂಬುದು ಇ.ಡಿ ಅಧಿಕಾರಿಗಳ ಮಾಹಿತಿಯ ಬಳಿಕ ಗೊತ್ತಾಗಬೇಕಿದೆ.

ಕಳೆದ 28 ಗಂಟೆಗಳಿಂದ ಇ.ಡಿ ಅಧಿಕಾರಿಗಳು ತಪಾಸಣೆ ನಡೆಸುತ್ತಿದ್ದು, ನಿನ್ನೆ ರಾಜ್ಯಾದ್ಯಂತ ಬೆಂಗಳೂರು, ಬೆಳಗಾವಿ, ಗೋಕಾಕ್ ಸೇರಿ ಒಟ್ಟು 18 ಕಡೆ ಏಕಕಾಲಕ್ಕೆ ದಾಳಿ ನಡೆಸಲಾಗಿತ್ತು. ದಾಳಿ ಮುಂದುವರೆದಿದ್ದು, ಸದ್ಯ ಸತೀಶ ಜಾರಕಿಹೊಳಿ ಬೆಂಗಳೂರಿನಲ್ಲಿದ್ದಾರೆ. ಗೋಕಾಕಿನಲ್ಲಿ ಅವರ ಪತ್ನಿ ಶಕುಂತಲಾ, ಪುತ್ರಿ ಪ್ರಿಯಾಂಕಾ ಜಾರಕಿಹೊಳಿ, ಪುತ್ರ ರಾಹುಲ್ ಜಾರಕಿಹೊಳಿ ಅವರಿಂದ ಇ.ಡಿ ಅಧಿಕಾರಿಗಳ ತಂಡ ಮಾಹಿತಿ ಕಲೆ ಹಾಕುತ್ತಿದೆ. ಅರೆಸೇನಾ ಪಡೆಯ ಭದ್ರತೆಯಲ್ಲಿ ದಾಖಲೆಗಳ ಪರಿಶೀಲನೆ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಬೆಳಗಾವಿ ಟಿಪ್ಪಿ ಸೆಂಟರ್‌ನಲ್ಲಿರುವ ಡಾ.ವೈ. ಮಂಜುನಾಥ ಅವರ ಮನೆಯಿಂದ 28 ಗಂಟೆಗಳ ಕಾಲ ಶೋಧದ ಬಳಿಕ ಇ.ಡಿ ಅಧಿಕಾರಿಗಳು ಹೊರಗೆ ಬಂದಿದ್ದಾರೆ. ಮತ್ತೊಂದು ತಂಡದಿಂದ ಪರಿಶೀಲನೆ ಕಾರ್ಯ ಮುಂದುವರೆದಿದೆ ಎಂದು ತಿಳಿದುಬಂದಿದೆ.

ಜೂನ್ 24ರಂದು ಅಬಕಾರಿ ಇಲಾಖೆ ಹೆಚ್ಚುವರಿ ಆಯುಕ್ತ ವೈ.ಮಂಜುನಾಥ್ ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದರು. ಸತೀಶ್ ಜಾರಕಿಹೊಳಿಯವರ ಸಹೋದರಿಯ ಪತಿಯಾಗಿರುವ ಮಂಜುನಾಥ್ ಅವರ ವಿರುದ್ಧ ಅಬಕಾರಿ ಇಲಾಖೆಯಲ್ಲಿ ಅಕ್ರಮ ಹಾಗೂ ಆ ಹಣದ ವರ್ಗಾವಣೆಯ ಆರೋಪದಡಿ ಬೆಳಗಾವಿಯ ಹನುಮಾನ್ ನಗರದ ನಿವಾಸ, ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯ ಅಪಾರ್ಟ್‌ಮೆಂಟ್‌ನಲ್ಲಿರುವ ಫ್ಲ್ಯಾಟ್, ಮೈಸೂರು, ಹರಪನಹಳ್ಳಿ ಸೇರಿದಂತೆ ಒಟ್ಟು 6 ಸ್ಥಳಗಳಲ್ಲಿ ದಾಳಿ ನಡೆಸಲಾಗಿತ್ತು.

# ಭದ್ರೆಯಿಂದ ರೈತರ ಬದುಕು ಹಸನಾಗಲಿ

• **ಉದಯವಾಹಿನಿ, ಹೊಳಲ್ಕೆರೆ:**

'ಏಳು ದಶಕಗಳ ಕನಸಾಗಿದ್ದ ಭದ್ರಾ ಮೇಲ್ದಂಡೆ ಯೋಜನೆ ಈಗ ಸಾಕಾರಗೊಂಡಿದ್ದು, ಭದ್ರೆಯಿಂದ ರೈತರ ಬಾಳು ಹಸನಾಗಲಿ' ಎಂದು ಶಾಸಕ ಎಂ.ಚಂದ್ರಪ್ಪ ಶುಭ ಕೋರಿದರು. ಚಿಕ್ಕಯಗಟಿ ಸಮೀಪ ಭದ್ರೆ ಹರಿಯುವ ಸ್ಥಳದಲ್ಲಿ ಬಾಗಿನ ಅರ್ಪಿಸಿ ಅವರು ಮಾತನಾಡಿದರು.

ಯೋಜನೆ ಕಾರ್ಯಗತವಾಗಿ ತಾಲ್ಲೂಕಿಗೆ ಭದ್ರಾ ನೀರು ಹರಿದಿರುವುದು ನನ್ನ ಜೀವನದಲ್ಲಿ ಮರೆಯಲಾರದ ಕ್ಷಣ. ಯೋಜನೆ ಜಾರಿಯಾಗಲು ಹಲವು ಮಹನೀಯರ ಕೊಡುಗೆ ಇದೆ. ಯೋಜನೆ ಮಂಜೂರಾದ ನಂತರ ಬಂದ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ಮುಖ್ಯಮಂತ್ರಿಗಳು ಯೋಜನೆಗೆ ಕೊಡುಗೆ ನೀಡಿದ್ದಾರೆ. ಏಳು ಬೀಳುಗಳ ನಂತರ ಕೊನೆಗೂ ಬಯಲು ಸೀಮೆಯ ರೈತರ ಕನಸು ನನಸಾಗಿದೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೂ ಭದ್ರಾ ನೀರು ಹರಿಯಲಿದ್ದು, ಸದಾ ಬರಗಾಲಕ್ಕೆ ತುತ್ತಾಗುವ ಬಯಲು ಸೀಮೆಯ ರೈತರು ಸಂತಸಗೊಂಡಿದ್ದಾರೆ' ಎಂದರು.

'ಇಂಜಿನಿಯರ್‌ಗಳು, ಗುತ್ತಿಗೆದಾರರು, ಕಾರ್ಮಿಕರು ದೊಡ್ಡ ಯಂತ್ರಗಳನ್ನು ಬಳಸಿ ಹಗಲು-ರಾತ್ರಿ ಕೆಲಸ ಮಾಡಿದ್ದರಿಂದ ಕಾಮಗಾರಿ ಬೇಗ ಮುಗಿದು ನೀರು ಹರಿಸಲು ಸಾಧ್ಯವಾಯಿತು' ಎಂದು ಸ್ಮರಿಸಿದರು.



ಉದಯವಾಹಿನಿ ಚಿತ್ರ

'ತಾಲ್ಲೂಕಿನ 37 ಕೆರೆಗಳಿಗೆ ಭದ್ರಾ ನೀರು ಹರಿಯಲಿದೆ. ತಾಳ್ಯ ಹೋಬಳಿಯ ಕೆರೆಗಳನ್ನು ಕೈಬಿಡಲಾಗಿತ್ತು. ಹೆಚ್ಚುವರಿಯಾಗಿ ಆ ಭಾಗದ ಕೆರೆಗಳನ್ನು ಯೋಜನೆಯಡಿ ಮಂಜೂರು ಮಾಡಲಾಯಿತು.

ಗಂಗಸಮುದ್ರ ಕೆರೆಯಿಂದ ಪಟ್ಟಣದ ಚಿಕ್ಕ ಕೆರೆಗೆ ನೀರು ತುಂಬಿಸಲಾಗುವುದು. 108 ಕೋಟಿ ವೆಚ್ಚದಲ್ಲಿ ಜಾಕ್ ವೆಲ್ ನಿರ್ಮಿಸಿದ್ದು, 1030 ಎಚ್‌ಪಿ ಸಾಮರ್ಥ್ಯದ 2 ಟ್ರಾನ್ಸ್‌ಫಾರ್ಮರ್ ಅಳವಡಿಸಲಾಗಿದೆ.

ಅಲ್ಲಿಂದ ಏತ ನೀರಾವರಿ ಮೂಲಕ ತಾಳ್ಯ ಹೋಬಳಿಯ ಶಿವಗಂಗಾ, ತಾಳ್ಯ, ಟಿ.ಎಮ್ಮಿಗನೂರು, ಹಳೇಹಳ್ಳಿ, ಹೊರಕೆರೆ ದೇವರಪುರ, ಕೆರೆಯಾಗಳಹಳ್ಳಿ ಕೆರೆಗಳಿಗೆ ನೀರು ಹರಿಸಲಾಗುವುದು' ಎಂದು ಹೇಳಿದರು.

## ವಂದೇ ಭಾರತ್ ರೈಲಿನ ಪ್ರಾಯೋಗಿಕ ಸಂಚಾರದ ಸಂದರ್ಭದಲ್ಲಿ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

# ಬೆಂಗಳೂರು ಮಂಗಳೂರು ವಂದೇ ಭಾರತ್ ರೈಲಿನ ಮತ್ತೊಂದು ಪ್ರಾಯೋಗಿಕ ಸಂಚಾರ

• **ಉದಯವಾಹಿನಿ, ಸುಬ್ರಹ್ಮಣ್ಯ**

ಯಶವಂತಪುರ-ಮಂಗಳೂರು ನಡುವೆ 16 ಕೋಚ್‌ಗಳ ವಂದೇ ಭಾರತ್ ರೈಲು ಮತ್ತೊಂದು ಹಂತದ ಪ್ರಾಯೋಗಿಕ ಸಂಚಾರ ಮಾಡಲಿದ್ದು, ಸುಬ್ರಹ್ಮಣ್ಯ ರೋಡ್ ಸೇರಿ ಹಲವು ನಿಲ್ದಾಣಗಳಲ್ಲಿ ಸಮಯದ ಪರಿಶೀಲನೆ ಕಾರ್ಯ ನಡೆಯಲಿದೆ.

ರೈಲ್ವೆ ಮಂಡಳಿಯ ಸೂಚನೆಯಂತೆ ದಕ್ಷಿಣ-ಪಶ್ಚಿಮ ರೈಲ್ವೆಯು ಈ ಸಂಬಂಧ ಅಧಿಕೃತ ಆದೇಶ ಹೊರಡಿಸಿದೆ. ಖಾಲಿ ಬೋಗಿಗಳಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲನ್ನು ಬಳಸಿಕೊಂಡು ಪ್ರಾಯೋಗಿಕ ಸಂಚಾರ ನಡೆಸಲಾಗುತ್ತಿದೆ. IC 2015 ಸಂಖ್ಯೆಯ 16 ಬೋಗಿಗಳ ವಂದೇ ಭಾರತ್ ರೈಲನ್ನು ಈ ಪರೀಕ್ಷೆಗೆ ಬಳಸಿಕೊಳ್ಳಲಾಗುತ್ತಿದೆ.

**ಬೆಳಗ್ಗೆ 6.50ಕ್ಕೆ ಯಶವಂತಪುರದಿಂದ ಪ್ರಯಾಣ:** ನಿಗದಿಪಡಿಸಿರುವ ತಾತ್ಕಾಲಿಕ ವೇಳಾಪಟ್ಟಿಯಂತೆ ರೈಲು ಸೆ.10ರಂದು ಬೆಳಗ್ಗೆ 6.50ಕ್ಕೆ ಯಶವಂತಪುರದಿಂದ ಹೊರಡಲಿದೆ. ಬಳಿಕ ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಕಬಕ ಪುತ್ತೂರು ಮಾರ್ಗವಾಗಿ ಮಂಗಳೂರು ಜಂಕ್ಷನ್ ತಲುಪಲಿದೆ. ರೈಲು ಹಾಸನಕ್ಕೆ ಬೆಳಗ್ಗೆ 9.33ಕ್ಕೆ ತಲುಪಿ, 9.35ಕ್ಕೆ ಹೊರಡಲಿದೆ. ಬಳಿಕ ಸಕಲೇಶಪುರಕ್ಕೆ 10.25ಕ್ಕೆ ಆಗಮಿಸಿ 10.30ಕ್ಕೆ ನಿರ್ಗಮಿಸಲಿದೆ. ಘಾಟ್ ಪ್ರದೇಶದ ಪ್ರಮುಖ ನಿಲ್ದಾಣವಾದ ಸುಬ್ರಹ್ಮಣ್ಯ ರೋಡ್‌ಗೆ ಮಧ್ಯಾಹ್ನ 12.50ಕ್ಕೆ ತಲುಪಿ 12.55ಕ್ಕೆ ಪ್ರಯಾಣ ಮುಂದುವರೆಯಲಿದೆ. ಬಳಿಕ ಕಬಕ ಪುತ್ತೂರಿಗೆ ಮಧ್ಯಾಹ್ನ 2.34ಕ್ಕೆ ಆಗಮಿಸಿ 2.36ಕ್ಕೆ ಹೊರಡಲಿದೆ. ಬಳಿಕ ಮಂಗಳೂರು ಜಂಕ್ಷನ್‌ಗೆ ಮಧ್ಯಾಹ್ನ 2.40ಕ್ಕೆ ತಲುಪುವಂತೆ ತಾತ್ಕಾಲಿಕ ವೇಳಾಪಟ್ಟಿ ರೂಪಿಸಲಾಗಿದೆ ಎಂದು ದಕ್ಷಿಣ-ಪಶ್ಚಿಮ ರೈಲ್ವೆಯು ತಿಳಿಸಿದೆ.






**ಮಧ್ಯಾಹ್ನ 3.10ಕ್ಕೆ ಮಂಗಳೂರು ಜಂಕ್ಷನ್‌ನಿಂದ ವಾಪಸ್:** ಮಂಗಳೂರು ಜಂಕ್ಷನ್‌ನಿಂದ ವಂದೇ ಭಾರತ್ ರೈಲು ಮಧ್ಯಾಹ್ನ 3.10ಕ್ಕೆ ಯಶವಂತಪುರದತ್ತ ವಾಪಸ್ ಪ್ರಯಾಣ ಆರಂಭಿಸಲಿದೆ. ಈ ವೇಳೆ ಕಬಕ ಪುತ್ತೂರಿಗೆ 3.20ಕ್ಕೆ, ಸಕಲೇಶಪುರಕ್ಕೆ ಸಂಜೆ 6.50ರ ಸುಮಾರಿಗೆ ಮತ್ತು ಹಾಸನಕ್ಕೆ ಸಂಜೆ 7.45ರ ಸುಮಾರಿಗೆ ತಲುಪುವ ವೇಳಾಪಟ್ಟಿ ನೀಡಲಾಗಿದೆ. ರಾತ್ರಿ 10.30ಕ್ಕೆ ಯಶವಂತಪುರ ತಲುಪುವ ನಿರೀಕ್ಷಿತ ಸಮಯ ನಿಗದಿಪಡಿಸಲಾಗಿದೆ. ಇವು ಪ್ರಾಯೋಗಿಕ ಸಂಚಾರಕ್ಕಾಗಿ ನಿಗದಿಪಡಿಸಿರುವ ತಾತ್ಕಾಲಿಕ ಸಮಯಗಳಾಗಿದ್ದು, ಅಂತಿಮ ಸಂಚಾರದ ವೇಳಾಪಟ್ಟಿಯೆಂದು ಪರಿಗಣಿಸಲಾಗುವುದಿಲ್ಲ ಎಂದು ರೈಲ್ವೆ ಮೂಲಗಳು ಸ್ಪಷ್ಟಪಡಿಸಿವೆ.

**ಸುರಕ್ಷತೆಗೆ ಆದ್ಯತೆ:** **ಪ್ರಾಯೋಗಿಕ ರನ್ ಸಂದರ್ಭದಲ್ಲಿ ಎಲ್ಲಾ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸುರಕ್ಷತೆಯಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ, ಸಾಧ್ಯವಾದಷ್ಟು ಪ್ರಯಾಣದ ಸಮಯವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ರೈಲಿನ ಕಾರ್ಯಾಚರಣೆಯನ್ನು ಪರಿಶೀಲಿಸುವಂತೆ ಅಧಿಕಾರಿಗಳಿಗೆ ರೈಲ್ವೆ ಇಲಾಖೆ ಸೂಚಿಸಿದೆ.**

**ಘಾಟ್ ಪ್ರದೇಶದ ಸಂಚಾರದ ಮೇಲೆ ವಿಶೇಷ ಗಮನ:** ವಂದೇ ಭಾರತ್ ರೈಲು ಸಕಲೇಶಪುರ-ಸುಬ್ರಹ್ಮಣ್ಯ ರೋಡ್ ನಡುವಿನ ಘಾಟ್ ಭಾಗದಲ್ಲಿ ಹೇಗೆ ಸಂಚರಿಸಲಿದೆ ಎಂಬುದರ ಬಗ್ಗೆ ವಿಶೇಷ ಗಮನ ಹರಿಸಲಾಗುತ್ತಿದೆ. ರೈಲಿನ ವೇಗ, ಸುರಕ್ಷತೆ,

**ಅಧಿಕಾರಿಗಳಿಂದ ಜಂಟಿ ಪರಿಶೀಲನೆ**

**ಬೆಂಗಳೂರು ಮತ್ತು ಮೈಸೂರು ವಿಭಾಗಗಳ ರೈಲ್ವೆ ಅಧಿಕಾರಿಗಳು, ವೇಳಾಪಟ್ಟಿ ನಿಯಂತ್ರಕರು, ವಿದ್ಯುತ್, ಟ್ರ್ಯಾಕ್ ಹಾಗೂ ಇಂಜಿನಿಯರಿಂಗ್, ಮೆಕ್ಯಾನಿಕಲ್ ಸೇರಿದಂತೆ ವಿವಿಧ ವಿಭಾಗಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರಾಯೋಗಿಕ ಸಂಚಾರದಲ್ಲಿ ಭಾಗವಹಿಸಲಿದ್ದಾರೆ. ಇದು ಪೂರ್ಣಗೊಂಡ ಬಳಿಕ ವಿಭಾಗೀಯ ಮಟ್ಟದಲ್ಲಿ ಪರಿಶೀಲನಾ ಅಂಶಗಳನ್ನು ಒಳಗೊಂಡ ವಿವರವಾದ ವರದಿಯನ್ನು ದಕ್ಷಿಣ ಪಶ್ಚಿಮ ರೈಲ್ವೆಯ ಸಂಬಂಧಪಟ್ಟ ಕಚೇರಿಗೆ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ.**

ಕಾರ್ಯಾಚರಣಾ ಅಂಶಗಳು ಹಾಗೂ ವಿವಿಧ ವಿಭಾಗಗಳ ಸಮನ್ವಯವನ್ನು ಅಧಿಕಾರಿಗಳು ಪರಿಶೀಲಿಸಲಿದ್ದಾರೆ.

ಪ್ರಾಯೋಗಿಕ ರನ್ ವೇಳೆ ಮೂಲ ನಿಲ್ದಾಣ, ಅಂತಿಮ ನಿಲ್ದಾಣ, ವಿಭಾಗಗಳ ನಡುವಿನ ಇಂಟರ್‌ಚೇಂಜ್ ಮತ್ತು ನಿಗದಿತ ನಿಲುಗಡೆ ಸಮಯಗಳನ್ನು ದಾಖಲಿಸಬೇಕು. ಘಾಟ್ ಭಾಗದಲ್ಲಿ ರೈಲಿನ ಸಂಚಾರವನ್ನು ನೇರವಾಗಿ ಗಮನಿಸಿ ಅದರ ಕುರಿತು ಪ್ರತ್ಯೇಕ ವರದಿ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಬೆಂಗಳೂರು-ಮಂಗಳೂರು ವಂದೇ ಭಾರತ್ ರೈಲು ಸೇವೆಯ ಅಂತಿಮ ವೇಳಾಪಟ್ಟಿ, ನಿಲ್ದಾಣಗಳು ಹಾಗೂ ವಾಣಿಜ್ಯ ಸಂಚಾರ ಆರಂಭದ ಕುರಿತು ರೈಲ್ವೆ ಇಲಾಖೆಯ ಮುಂದಿನ ನಿರ್ಧಾರವು ಕುತೂಹಲ ಮೂಡಿಸಿದೆ.

## ಮಿನಿ ನ್ಯೂಸ್

### ಫೋನ್ ಮಾಡದ ಪ್ರಿಯಕರ, ನೇಣಿಗೆ ಶರಣಾದ ಎರಡು ಮಕ್ಕಳ ತಾಯಿ

• **ಉದಯವಾಹಿನಿ, ಬಾಗಲಕೋಟೆ,**

ಪ್ರಿಯಕರ ಕರೆ ಮಾಡದೇ ಇದ್ದಿದ್ದಕ್ಕೆ ಹಾಗೂ ಕರೆ ಮಾಡಿದ್ರೂ ಸ್ವೀಕರಿಸದೇ ಇದ್ದಿದ್ದಕ್ಕೆ ಮನನೊಂದು ಎರಡು ಮಕ್ಕಳ ತಾಯಿ ನೇಣಿಗೆ ಶರಣಾದ ಘಟನೆ ಬಾಂಬೆ ಕಾಲೋನಿಯಲ್ಲಿ ನಡೆದಿದೆ.

ಮೆಹಬೂಬ್ ಬಿ (27) ನೇಣಿಗೆ ಶರಣಾದ ಮಹಿಳೆ. ಆತಹತ್ಯೆಗೂ ಮುನ್ನ, ನೇಣು ಬಿಗಿದುಕೊಳ್ಳುವುದನ್ನು ವಿಡಿಯೋ ಮಾಡಿ, ಪ್ರಿಯಕರನಿಗೆ ಕಳಿಸಿದ್ದಾಳೆ. ಅಲ್ಲದೇ ಫೋನ್ ಮಾಡದೆ ಇದ್ದರೆ ನೇಣು ಹಾಕಿಕೊಂಡು ಸಾಯುತ್ತೇನೆ. ನಿನಗೂ ಹಾಗೂ ಎಲ್ಲರಿಗೂ ವಿಡಿಯೋ ಕಳಿಸುತ್ತೇನೆ.

ನಿನ್ನ ಹೆಸರು ಬರೆದಿಟ್ಟು ಸಾಯುತ್ತೇನೆ ಎಂದು ನಿನ್ನೆ ಆಡಿಯೋ ಮೆಸೇಜ್ ಕೂಡ ಮಾಡಿದ್ದಳು. ಮಹಿಳೆ ಯುವಕನೊಬ್ಬನ ಜೊತೆ ಸಂಬಂಧ ಹೊಂದಿದ್ದಳು. ಕೆಲ ದಿನಗಳಿಂದ ಪ್ರಿಯಕರ ಕರೆ ಮಾಡುತ್ತಿರಲಿಲ್ಲ. ಕರೆ ಮಾಡಿದರೂ ಸ್ವೀಕರಿಸುತ್ತಿರಲಿಲ್ಲ. ಇದರಿಂದ ಮನನೊಂದು ಆತಹತ್ಯೆ ಮಾಡಿಕೊಂಡಿದ್ದಾಳೆ ಎನ್ನಲಾಗಿದೆ. ಸ್ಥಳಕ್ಕೆ ನವನಗರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

### ವಿವಿಧ ಬೇಡಿಕೆಗಳ ಈಡೇರಿಕೆಗೆ ಕೆಡಿಎಸ್‌ಎಸ್ ಮನವಿ

• **ಉದಯವಾಹಿನಿ,ಯಾದಗಿರಿ:**

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಘಟಕದ ವತಿಯಿಂದ ನಗರದ ರೈಲ್ವೆ ನಿಲ್ದಾಣದಲ್ಲಿ ಸಿಕಂದರಾಬಾದ್ ವಲಯ ರೈಲ್ವೆ ನಿಯಂತ್ರಣಾಧಿಕಾರಿ ಆರ್.ಗೋಪಾಲಕೃಷ್ಣನ್ ಅವರಿಗೆ ಮನವಿ ಪತ್ರ ನೀಡಿದರು.

ಜಿಲ್ಲಾ ಕೇಂದ್ರದಲ್ಲಿ ಎಲ್ಲಾ ಎಕ್ಸ್‌ಪ್ರೆಸ್ ರೈಲುಗಳನ್ನು ನಿಲ್ಲಿಸಬೇಕು, ಕೋವಿಡ್ ಪೂರ್ವ ಬೆಳಗ್ಗಿನ ಸಮಯದಲ್ಲಿನ ಕಲಬುರಗಿ-ರಾಯಚೂರು ,ರಾಯಚೂರು-ಕಲಬುರಗಿ ಇಂಟರ್‌ಸಿಟಿ ಮಾರ್ಗಗಳನ್ನು ಪುನರ್ ಆರಂಭಮಾಡಬೇಕು ಎಂದರು.

ನಗರದಿಂದ ಬೆಂಗಳೂರು ನಗರಕ್ಕೆ ಮತ್ತು ಬೆಂಗಳೂರು ನಗರದಿಂದ ಯಾದಗಿರಿಗೆ ಬೆಳಗ್ಗಿನ ವೇಳೆ ಹೊಸ ರೈಲು ಆರಂಭಿಸಬೇಕು, ನಗರದ ರೈಲ್ವೆ ನಿಲ್ದಾಣದ ಕಾಮಗಾರಿಗಳು ಕಳಪೆ ಮಟ್ಟದಲ್ಲಿದ್ದು, ಗುಣಮಟ್ಟದ ಪರಿಶೀಲನರ ನಡೆಸುವ ಮೂಲಕ ಕ್ರಮವಹಿಸಬೇಕು ಎಂದು ಪತ್ರದಲ್ಲಿ ಕೋರಲಾಗಿದೆ. ಜಿಲ್ಲಾ ಘಟಕ ನಿಂಗಣ್ಣ ಬೀರ್ನಾಳ, ಅಶೋಕ ನಾಯ್ಕಲ್, ಮಲ್ಲಿಕಾರ್ಜುನ, ಹಂಪಯ್ಯ ಉಪಸ್ಥಿತರಿದ್ದರು.

### ಉತ್ತರಕರ್ನಾಟಕ, ಎಲ್ಲಿ ಉಷ್ಣಾಂಶ ಎಷ್ಟು? ರಾಯಚೂರು, ಕಲಬುರಗಿ, ವಿಜಯಪುರ ಜಿಲ್ಲೆಯಲ್ಲಿ ಅಧಿಕ

• **ಉದಯವಾಹಿನಿ, ಉತ್ತರಕರ್ನಾಟಕ :**

ಉತ್ತರ ಕರ್ನಾಟಕದ ಕಲಬುರಗಿ, ರಾಯಚೂರು ಸಹಿತ ಹಲವು ಜಿಲ್ಲೆಗಳಲ್ಲಿ ಮಳೆಗಾಲದಲ್ಲೇ ಬೇಸಿಗೆ ಕಾಲದ ಅನುಭವವಾಗುತ್ತಿದೆ. ರಾಯಚೂರು ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 35.8 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದರೆ, ಕಲಬುರಗಿಯಲ್ಲಿ 35 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರ ಕಳೆದ 24 ಗಂಟೆ ಅವಧಿಯ ವಿವಿಧ ಜಿಲ್ಲಾ ಕೇಂದ್ರಗಳ ಉಷ್ಣಾಂಶದ ಮಾಹಿತಿ ಬಿಡುಗಡೆ ಮಾಡಿದೆ. ಕಲ್ಯಾಣ ಕರ್ನಾಟಕದ ಬೀದರ್‌ನಲ್ಲಿ 33 ಡಿಗ್ರಿ ಸೆಲ್ಸಿಯಸ್, ಬಳ್ಳಾರಿಯಲ್ಲಿ 33.8 ಡಿಗ್ರಿ ಸೆಲ್ಸಿಯಸ್ ಯಾದಗಿರಿಯಲ್ಲಿ 34.9 ಡಿಗ್ರಿ ಸೆಲ್ಸಿಯಸ್, ವಿಜಯನಗರದಲ್ಲಿ 33.3 ಡಿಗ್ರಿ ಸೆಲ್ಸಿಯಸ್, ಕೊಪ್ಪಳದಲ್ಲಿ 33.5 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಕಿತ್ತೂರು ಕರ್ನಾಟಕದ ಬೆಳಗಾವಿ ಜಿಲ್ಲೆಯಲ್ಲಿ 33.2 ಡಿಗ್ರಿ ಸೆಲ್ಸಿಯಸ್, ಬಾಗಲಕೋಟೆಯಲ್ಲಿ 33.7, ಹಾವೇರಿಯಲ್ಲಿ 33.6, ಧಾರವಾಡದಲ್ಲಿ 32.5 ಡಿಗ್ರಿ ಸೆಲ್ಸಿಯಸ್, ಗದಗದಲ್ಲಿ 33.1 ಹಾಗೂ ವಿಜಯಪುರ ಜಿಲ್ಲೆಯಲ್ಲಿ 34.2 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಮಧ್ಯ ಕರ್ನಾಟಕದ ದಾವಣಗೆರೆಯಲ್ಲಿ 33.4 ಡಿಗ್ರಿ, ಚಿತ್ರದುರ್ಗದಲ್ಲಿ 33 ಡಿಗ್ರಿ ಸೆಲ್ಸಿಯಸ್, ಮಲೆನಾಡಿನ ಶಿವಮೊಗ್ಗದಲ್ಲಿ 31.3 ಡಿಗ್ರಿ, ಚಿಕ್ಕಮಗಳೂರಿನಲ್ಲಿ 30.8 ಡಿಗ್ರಿ, ಹಾಸನದಲ್ಲಿ 31.2 ಡಿಗ್ರಿ ಹಾಗೂ ಕೊಡಗು ಜಿಲ್ಲೆಯಲ್ಲಿ 29.3 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿತ್ತು.

ಕರಾವಳಿ ಜಿಲ್ಲೆಗಳಾದ ಉಡುಪಿಯಲ್ಲಿ 32.5, ಉತ್ತರ ಕನ್ನಡದಲ್ಲಿ 32.2, ದಕ್ಷಿಣ ಕನ್ನಡದಲ್ಲಿ 33.1 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಹಳೆ ಮೈಸೂರು ಭಾಗದ ಜಿಲ್ಲೆಗಳಲ್ಲಿ ಚಾಮರಾಜನಗರ 34.1 ಡಿಗ್ರಿ, ಮೈಸೂರಿನಲ್ಲಿ 33.3 ಡಿಗ್ರಿ, ಮಂಡ್ಯದಲ್ಲಿ 33.2 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ, ಬೆಂಗಳೂರು ಭಾಗದ ಬೆಂಗಳೂರು ನಗರದಲ್ಲಿ 31.9 ಡಿಗ್ರಿ, ಗ್ರಾಮಾಂತರ ಜಿಲ್ಲೆಯಲ್ಲಿ 31.8 ಡಿಗ್ರಿ, ದಕ್ಷಿಣ ಜಿಲ್ಲೆಯಲ್ಲಿ 32.7 ಡಿಗ್ರಿ ದಾಖಲಾಗಿದೆ. ತುಮಕೂರು ಜಿಲ್ಲೆಯಲ್ಲಿ 32.5 ಡಿಗ್ರಿ ಸೆಲ್ಸಿಯಸ್, ಕೋಲಾರದಲ್ಲಿ 33.2 ಡಿಗ್ರಿ ಸೆಲ್ಸಿಯಸ್, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 32.5 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

### ಮಹಾಲಿಂಗೇಶ್ವರರು ಭಕ್ತಿ, ಜ್ಞಾನ, ವೈರಾಗ್ಯದ ಹಾದಿ ತೋರಿದ ಮಹಾತಪಸ್ವಿ

• **ಉದಯವಾಹಿನಿ, ಚಿತ್ರದುರ್ಗ:**

'ಭಕ್ತಿ, ಜ್ಞಾನ ಮತ್ತು ವೈರಾಗ್ಯವನ್ನು ಬದುಕಿನ ಹಾದಿಯಾಗಿಸಿಕೊಂಡು ಜನರಿಗೆ ನೆಮ್ಮದಿ ಹಾಗೂ ಜೀವನದ ಮಾರ್ಗ ತೋರಿದ ಮಹಾತಪಸ್ವಿ ಮಹಾಲಿಂಗೇಶ್ವರರು. ಇವರು ನಾಡಿನ ಶರಣ ಪರಂಪರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾರೆ' ಎಂದು ಚಿಂತಕ ದೊಡ್ಡಮಲ್ಲಯ್ಯ ಹೇಳಿದರು. ನಗರದ ಮುರುಘಾ ಮಠದಲ್ಲಿ ಆಯೋಜಿಸಿದ್ದ ಅನುಭಾವ ಶ್ರಾವಣ, ಶರಣ ಚಿಂತನ ಮಾಲಿಕೆಯಲ್ಲಿ ಮಹಾಲಿಂಗಪುರದ ಮಹಾ ಲಿಂಗೇಶ್ವರರ ಜೀವನ ಹಾಗೂ ಸಾಧನೆ ಕುರಿತ ಉಪನ್ಯಾಸ ನೀಡಿದರು.

18ನೇ ಶತಮಾನದಲ್ಲಿ ಹಿಮಾಲಯದಿಂದ ಕರ್ನಾಟಕದ ಶರಣ ಪರಂಪರೆಯತ್ತ ಬಂದ ಮಹಾಲಿಂಗೇಶ್ವರರು ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಢಳಾಪುರಕ್ಕೆ ಆಗಮಿಸಿದರು. ಕನ್ನಡ ನಾಡಿನಲ್ಲಿ ಶರಣರಾಗಿ ಸಂಚರಿಸುವ ಮುನ್ನ ಅಷ್ಟಾವರಣಗಳ ಸುಸಂಪನ್ನರಾಗಬೇಕೆಂಬ ಗುರುಗಳ ಸಲಹೆಯಂತೆ ಶಿವದೀಕ್ಷೆ ಸ್ವೀಕರಿಸಿದರು.

### ಜಿಪಂ ಸಿಇಒ ಕಾಮಗಾರಿ ಪರಿಶೀಲನೆ

• **ಉದಯವಾಹಿನಿ, ಚಿಟಗುಪ್ಪ**

ತಾಲ್ಲೂಕಿನ ಬೇಮಳಖೇಡಾ ಮತ್ತು ಮೀನಕೇರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಬುಧವಾರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಿತ್ತೆ ಮಾಧವರಾವ್ ವಿಠಲ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬೇಮಳಖೇಡಾ ಗ್ರಾಮದಲ್ಲಿನ ಜಲ ಜೀವನ್ ಮಿಷನ್ ಯೋಜನೆಯಿಂದ ಮನೆ ಮನೆಗೆ ಅಳವಡಿಸಿರುವ ನಲ್ಲಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂಬುದನ್ನು ಪರಿಶೀಲಿಸಿ ಗ್ರಾಮಸ್ಥರಿಂದ ನೀರು ಪೂರೈಕೆ ಕುರಿತು ಮಾಹಿತಿ ಪಡೆದರು. ಗ್ರಾಮದಲ್ಲಿ ನಡೆದ ಜಲ ಜನಜೀವನ ಮಿಷನ್ ಯೋಜನೆಯ ಕಾಮಗಾರಿ ಕಳಪೆ ಆಗಿದೆ. ಸರಿಯಾಗಿ ನೀರು ಸರಬರಾಜು ಆಗುತ್ತಿಲ್ಲ. ಇದರಿಂದಾಗಿ ನಮಗೆ ನಿತ್ಯವೂ ಸಮಸ್ಯೆ ಉಂಟಾಗುತ್ತಿದೆ ಎಂದು ಗ್ರಾಮಸ್ಥರು ಸಿಇಒ ಅವರ ಮುಂದೆ ತಮ್ಮ ಅಳಲು ತೋಡಿಕೊಂಡರು. ಗ್ರಾಮದಲ್ಲಿನ ಪ್ರತಿ ಮನೆ ಮನೆಗೂ ಸಾರಾಗವಾಗಿ ನೀರು ಬರುವಂತೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

